ಏಪ್ರಿಲ್–ಜೂನ್, 2020

ನಹಿ ವಿಜ್ಞಾನೇನಸದೃಶಂ

# ವಿಜ್ಞಾನ ವಾಹಿನಿ

ಸಂಪುಟ 01 ; ಸಂಚಿಕೆ 01

## ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ, ಕರ್ನಾಟಕ ಸರ್ಕಾರ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

KSTA

'ಸರ್ವರಿಗಾಗಿ ವಿಜ್ಞಾನ ಮತ್ತು ತಂತ್ರಜ್ಞಾನ'

ಅಕಾಡೆಮಿಯ ಲೋಗೋ ವಿವರ

- ಜ್ಞಾನದ ಸಂಕೇತ
- ಜಿನ್ವೆ ವಿಜ್ಞಾನದ ಸಂಕೇತ
- ಹಸಿರು ಸಂವೃದ್ಧಿಯ ಸಂಕೇತ
- ಕರ್ನಾಟಕ ಸರ್ಕಾರ

### ಒಳ ಪುಟಗಳಲ್ಲಿ


| | |
|---|---|
| ವಿಜ್ಞಾನ, ಸಮಾಜ ಮತ್ತು ವೈಜ್ಞಾನಿಕ ಮನೋಧರ್ಮ – ಪ್ರೊ. ಹೆಚ್. ಎ. ರಂಗನಾಥ್ | 2 – 4 |
| 2019–20ನೇ ಸಾಲಿನ ಕಾರ್ಯಕ್ರಮಗಳ ಪಕ್ಷಿ ನೋಟ | 5 – 6 |
| ಅಕಾಡೆಮಿ ಸಭೆಗಳು | 6 |
| 2020–21ನೇ ಸಾಲಿನ ಯೋಜಿತ ಕಾರ್ಯಕ್ರಮಗಳು | 6 – 7 |
| 2020–21ರ ಮೊದಲ ತ್ರೈಮಾಸಿಕದಲ್ಲಿ ಹಮ್ಮಿಕೊಂಡ ಕಾರ್ಯಕ್ರಮಗಳು | 7 – 8 |
| ನಿಮಗಿದು ಗೊತ್ತೇ ? | 8 |
| ಡಾ. ಹೆಚ್. ಹೊನ್ನೇಗೌಡ – ಸಮರ್ಥ ವಿಜ್ಞಾನಿ ಮತ್ತು ದಕ್ಷ ಆಡಳಿತಗಾರ – ಡಾ. ಎ. ಎಂ. ರಮೇಶ್ | 9 |
| ಅಕಾಡೆಮಿ ಸದಸ್ಯರು | 10 |
| ಸಂಪರ್ಕ | 10 |


- *ಅಕಾಡೆಮಿಯು ಒಂದು ವಿಚಾರ ವೇದಿಕೆಯಾಗಿ, ಸಂಯೋಜಕರಾಗಿ, ಪ್ರವರ್ತಕರಾಗಿ, ಪ್ರೋತ್ಸಾಹಕರಾಗಿ, ಸಲಹೆಗಾರರಾಗಿ, ಮನೆ–ಮನಗಳಲ್ಲಿ ವಿಜ್ಞಾನದ ಪರಿಮಳವನ್ನು ಬೀರಲು ಸನ್ನದ್ಧವಾಗಿದೆ.*
- *ಜ್ಞಾನ–ವಿಜ್ಞಾನದ ಬೆಳಕು ನಮ್ಮ ದೈನಂದಿನ ಜೀವನದಲ್ಲಿ ಹಾಸು ಹೊಕ್ಕಾದರೆ, ಪ್ರತಿ ನಾಳೆಯೂ ಖಂಡಿತ ಉತ್ತಮವಾಗುತ್ತದೆ.*

## ಅಧ್ಯಕ್ಷರ ಲೇಖನಿಯಿಂದ

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪರಿವಾರಕ್ಕೆ ಶುಭಾಶಯಗಳು. ನಮ್ಮೆಲ್ಲರ ಜೀವನ ಶೈಲಿಯೇ ಆಗಿ ಹೋಗಿರುವ ವಿಜ್ಞಾನ ಮತ್ತು ತಂತ್ರಜ್ಞಾನಗಳಲ್ಲಿ ಆಸಕ್ತಿ ಹೊಂದಿರುವ ಪ್ರತಿಯೊಬ್ಬರೂ ಈ ಪರಿವಾರದ ಸದಸ್ಯರು. ಇದು, 2020ರ ಏಪ್ರಿಲ್ 21 ರಂದು ಸರಕಾರವು ಅಕಾಡೆಮಿಯ ಅಧ್ಯಕ್ಷರು ಮತ್ತು ಸದಸ್ಯರನ್ನು ಪುನರ್ ರಚಿಸಿದ ನಂತರ ಹೊರಬರುತ್ತಿರುವ ಮೊದಲ ಇ–ವಾರ್ತಾಪತ್ರ, 'ವಿಜ್ಞಾನ ವಾಹಿನಿ' ಯ ಮೊದಲ ಸಂಚಿಕೆ.

ಈ ಸಂದರ್ಭದಲ್ಲಿ, ರಾಜ್ಯದ ಸೇವೆ ಮಾಡಲು ಒಂದು ಸದವಕಾಶವನ್ನು ಒದಗಿಸಿಕೊಟ್ಟಿರುವ ಕರ್ನಾಟಕ ರಾಜ್ಯದ ಸನ್ಮಾನ್ಯ ಮುಖ್ಯಮಂತ್ರಿಗಳು; ಮಾನ್ಯ ಉಪ ಮುಖ್ಯಮಂತ್ರಿಗಳು ಹಾಗೂ ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ, ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು; ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು; ಪದಾಧಿಕಾರಿಗಳು ಮತ್ತು ಸಹೋದ್ಯೋಗಿಗಳಿಗೆ ನವರಚಿತ ಆಡಳಿತ ಮಂಡಳಿಯ ವಿಶಿಷ್ಟ ಸದಸ್ಯರೆಲ್ಲರ ಪರವಾಗಿ ಈ ವೇದಿಕೆಯ ಮೂಲಕ ನಮ್ಮ ಕೃತಜ್ಞತೆಗಳನ್ನು ಸಲ್ಲಿಸ ಬಯಸುತ್ತೇನೆ. ಸುಮಾರು 12 ವರ್ಷಗಳಿಗೂ ಹೆಚ್ಚು ಕಾಲ ಅಕಾಡೆಮಿಯ ಸಂಸ್ಥಾಪನಾ ಅಧ್ಯಕ್ಷರಾಗಿದ್ದ ಪ್ರಸಿದ್ಧ ಬಾಹ್ಯಾಕಾಶ ವಿಜ್ಞಾನಿ ಹಾಗೂ ಭಾರತ ಸರ್ಕಾರದ ಇಸ್ರೋ ಸಂಸ್ಥೆಯ ಅಧ್ಯಕ್ಷರೂ ಆಗಿದ್ದ ದಿವಂಗತ ಪ್ರೊಫೆಸರ್ ಯು. ಆರ್. ರಾವ್ ಮತ್ತು ಒಂದೂವರೆ ವರ್ಷಗಳ ಕಾಲ ಅಧ್ಯಕ್ಷರಾಗಿದ್ದ ಇಸ್ರೋ ಸಂಸ್ಥೆಯ ಯು. ಆರ್. ರಾವ್ ಉಪಗ್ರಹ ಕೇಂದ್ರದ ನಿರ್ದೇಶಕರಾಗಿದ್ದ ದಿವಂಗತ ಡಾ. ಎಸ್. ಕೆ. ಶಿವಕುಮಾರ್ ಅವರ ನೇತೃತ್ವದಲ್ಲಿ ಬೆಳೆದು ಬಂದ ಈ ಅಕಾಡೆಮಿಯ ಒಡನಾಟದಲ್ಲಿ ಕೆಲಸ ಮಾಡಲು ಸುವರ್ಣಾವಕಾಶ ಸಿಕ್ಕಿರುವುದು ನನಗೆ ಹೆಮ್ಮೆಯ ವಿಷಯ.

ಅಭೂತ ಪೂರ್ವ ಸವಾಲುಗಳು, ಜೊತೆ ಜೊತೆಗೆ ಮೂಡಿ ಬರುತ್ತಿರುವ ಸಮಾಧಾನಗಳ ನಡುವೆ ನಾವು ಮಾನುಕೂಲದ ಪಯಣದ ಕುತೂಹಲಕಾರಿ ಘಟ್ಟದಲ್ಲಿದ್ದೇವೆ. ಇಂದು ನಾವೆಲ್ಲರೂ ಎದುರಿಸುತ್ತಿರುವ, ನಮ್ಮನ್ನೆಲ್ಲರನ್ನು ಆವರಿಸಿರುವ ಹಾಗೂ ವಿಜ್ಞಾನ ಮತ್ತು ಸಮಾಜ ಪರಿಹಾರಕ್ಕೆ ಯತ್ನಿಸುತ್ತಿರುವ ಕೋವಿಡ್ 19, ಅಂತಹ ಒಂದು ಜಲ್ವಂತ ಸಮಸ್ಯೆಯ ಉದಾಹರಣೆಯಾಗಿದೆ. ವಿಜ್ಞಾನ ವೈಶ್ವಿಕ, ಆದರೆ, ತಂತ್ರಜ್ಞಾನ ಪ್ರಾಸ್ತಾವಿಕ ಮತ್ತು ಭೌಗೋಳಿಕ. ಇವುಗಳೊಂದಿಗೆ ಆವಿಷ್ಕಾರವೂ ಸೇರಿಕೊಂಡು, ನಮ್ಮ ಕ್ಷಿಪ್ರ, ಸುಸ್ಥಿರ ಮತ್ತು ಅಂತರ್ಗತಮುಖಿ ಬೆಳವಣಿಗೆಯ ಮತ್ತು ಅಭಿವೃದ್ಧಿಯ ಧ್ಯೇಯ ಸಾಧನೆಗೆ ತ್ರಿಚಕ್ರ ಪೂರಕ ಸಾಧನಗಳಾಗಿವೆ.



ಪ್ರೊ. ಎಸ್. ಅಯ್ಯಪ್ಪನ್

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು ಹಲವಾರು ವರ್ಷಗಳಿಂದ, ಮೂಲಭೂತ ವಿಜ್ಞಾನ ಮತ್ತು ಜ್ಞಾನ ಪ್ರಸರಣ, ವೈಜ್ಞಾನಿಕ ವಿಚಾರ ಪ್ರಸಾರ, ತಂತ್ರಜ್ಞಾನ ಅಭಿವೃದ್ಧಿ ಮತ್ತು ಅಳವಡಿಕೆ, ಆವಿಷ್ಕಾರ ಮತ್ತು ಸಂವಹನ ಮತ್ತಿತರ ಕೆಲಸಗಳಿಂದ ತನ್ನ ಧ್ಯೇಯಗಳನ್ನು ಪೂರ್ಣಗೊಳಿಸುತ್ತ ಬಂದಿದೆ. 'ದೂರದೃಷ್ಟಿ –ಆವಿಷ್ಕಾರ–ಸಹಭಾಗಿತ್ವ'ಗಳು ನಮ್ಮ ಮುಂದಿನ ಕಾರ್ಯಕ್ರಮಗಳಿಗೆ ಅವಶ್ಯಕ ಹಾಗೂ ಪೂರಕ ಅಂಶಗಳು. ತಂತ್ರಜ್ಞಾನ ಕ್ರಾಂತಿಯಲ್ಲಿ ಈಗಾಗಲೇ ಮುಂಚೂಣಿಯಲ್ಲಿರುವ ಕರ್ನಾಟಕ ರಾಜ್ಯ, ಸರ್ಕಾರಿ ಮತ್ತು ಕಾರ್ಪೋರೇಟ್ ವಿಜ್ಞಾನ ಸಂಸ್ಥೆ–ಸಂಘಟನೆಗಳ ಉಪಸ್ಥಿತಿ, ಸಂದಿಹ ವರ್ಷಗಳ ಪರಿಣಿತಿ ಮತ್ತು ಯುವ ಶಕ್ತಿಯಿಂದಾಗಿ ಭಾರತದ ವಿಜ್ಞಾನ ನಕ್ಷೆಯಲ್ಲಿ ವಿಶಿಷ್ಟ ಸ್ಥಾನದಲ್ಲಿದೆ.

ಅಕಾಡೆಮಿಯು ಒಂದು ವಿಚಾರ ವೇದಿಕೆಯಾಗಿ, ಸಂಯೋಜಕರಾಗಿ, ಪ್ರವರ್ತಕರಾಗಿ, ಪ್ರೋತ್ಸಾಹಕರಾಗಿ, ಸಲಹೆಗಾರರಾಗಿ, ಮನೆ–ಮನಗಳಲ್ಲಿ ವಿಜ್ಞಾನದ ಪರಿಮಳವನ್ನು ಬೀರಲು ಸನ್ನದ್ಧವಾಗಿದೆ. ಒಟ್ಟಾರೆಯಾಗಿ, ಜ್ಞಾನ–ವಿಜ್ಞಾನದ ಬೆಳಕು ನಮ್ಮ ದೈನಂದಿನ ಜೀವನದಲ್ಲಿ ಹಾಸು ಹೊಕ್ಕಾದರೆ, ಪ್ರತಿ ನಾಳೆಯೂ ಖಂಡಿತ ಉತ್ತಮವಾಗುತ್ತದೆ.

ಈ ದಿಸೆಯಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯು, ನಿಮ್ಮೆಲ್ಲರಿಂದ ಸಲಹೆಗಳನ್ನು, ಕೊಡುಗೆ–ದೇಣಿಗೆಗಳನ್ನು ಮತ್ತು ಸಹಭಾಗಿತ್ವವನ್ನು ಸ್ವಾಗತಿಸುತ್ತದೆ ಮತ್ತು ಆಪೇಕ್ಷಿಸುತ್ತದೆ. ಬನ್ನಿ, ನೀವು ಎಲ್ಲೇ ಇರಿ, ಏನನ್ನೇ ಮಾಡುತ್ತಿರಿ, ಈ ಜ್ಞಾನಯಾನದಲ್ಲಿ ಭಾಗಿಯಾಗೋಣ. ವಿಜ್ಞಾನ ಎಲ್ಲರ ಸ್ವತ್ತು ಮತ್ತು ಸಂಪತ್ತು, ಕಾಳಜಿ ಮತ್ತು ಕೈಂಕರ್ಯ.

– ಎಸ್. ಅಯ್ಯಪ್ಪನ್

ಜೂನ್ 30, 2020

# ವಿಜ್ಞಾನ, ಸಮಾಜ ಮತ್ತು ವೈಜ್ಞಾನಿಕ ಮನೋಧರ್ಮ

ಇಂದಿನ ಅತ್ಯಂತ ಕ್ಲಿಷ್ಟಕರವಾದ ಸಮಯದಲ್ಲಿ ಕೋವಿಡ್ ವೈರಾಣುವಿನ ನಿವಾರಣೆಗಾಗಿ ಪರಿಹಾರವನ್ನು ಕಂಡು ಹಿಡಿಯಬಲ್ಲ ವಿಜ್ಞಾನಿಗಾಗಿ ಜಗತ್ತೇ ಎದುರು ನೋಡುತ್ತಿದೆ. ಪ್ರಪಂಚಕ್ಕೆ ಆಗಾಗ್ಗೆ ಬಂದೆರಗಿದ ವೈರಾಣುಗಳ ಪರಿಹಾರ ವಿಜ್ಞಾನಿಗಳಿಂದಾಗಿರುವಂತೆಯೇ ಈಗಲೂ ಅದು ಸಾಧ್ಯವಾಗುತ್ತದೆ. ರಾಷ್ಟ್ರಕವಿ ಡಾ. ಜಿ.ಎಸ್.ಶಿರುದ್ರಪ್ಪನವರು ಇಂಥ ಭರವಸೆಯಿಂದ ತಮ್ಮ 'ಶ್ರೀ ವಿಜ್ಞಾನಿಗೆ' ಎಂಬ ಕವನದಲ್ಲಿ ವಿಜ್ಞಾನಿಗಳನ್ನು ತುಂಬಾ ಗೌರವದಿಂದ ಕಂಡಿದ್ದಾರೆ. ಅವರ ಕವನದ ಕೆಲವು ಸಾಲುಗಳು ಹೀಗಿವೆ :

'ಸದಾ ಪ್ರಶ್ನೆಗಳ ಬಾಗಿಲ ಬಡಿವ
ಹೊಸ ವಿಸ್ಮಯಗಳ ಕಿರಣವ ತೆರೆವ
ಸಾಕ್ಷಾತ್ಕಾರಕೆ ಜೀವವನೆರೆವ
ಶ್ರೀ ವಿಜ್ಞಾನಿಗೆ ನಮೋ ನಮೋ

ಪಾಚಿಗಟ್ಟಿರುವ ಮೌಢ್ಯವ ತೊಡೆವ
ವಿಚಾರ ಶಕ್ತಿಯ ಹೊನಲನು ತರುವ
ಅರಿವಿನ ಪರಿಧಿಯ ವಿಸ್ತರಿಸುವ
ಶ್ರೀ ವಿಜ್ಞಾನಿಗೆ ನಮೋ ನಮೋ'

" ವಿಜ್ಞಾನವನ್ನು ಬೇರೆಯವರು ಪ್ರಶ್ನಿಸುವ ಅಗತ್ಯವೇ ಇಲ್ಲ! ಏಕೆ ಅಂತ ಹೇಳಿದರೆ, ಪ್ರತಿ ಹೆಜ್ಜೆಯಲ್ಲೂ ವಿಜ್ಞಾನ ತನ್ನನ್ನು ತಾನು ಪ್ರಶ್ನಿಸಿಕೊಳ್ಳುತ್ತಲೇ ವಿಕಾಸವಾಗುತ್ತಾ ಹೋಗುವಂಥದ್ದು"

- ಕೆ.ಪಿ.ಪೂರ್ಣಚಂದ್ರ ತೇಜಸ್ವಿ

ಡಾ. ಕೆ.ಪಿ.ಪೂರ್ಣಚಂದ್ರ ತೇಜಸ್ವಿ ಅವರು "ವಿಜ್ಞಾನವನ್ನು ಬೇರೆಯವರು ಪ್ರಶ್ನಿಸುವ ಅಗತ್ಯವೇ ಇಲ್ಲ! ಏಕೆ ಅಂತ ಹೇಳಿದರೆ, ಪ್ರತಿ ಹೆಜ್ಜೆಯಲ್ಲೂ ವಿಜ್ಞಾನ ತನ್ನನ್ನು ತಾನು ಪ್ರಶ್ನಿಸಿಕೊಳ್ಳುತ್ತಲೇ ವಿಕಾಸವಾಗುತ್ತಾ ಹೋಗುವಂಥದ್ದು." ಎಂದು ವಿಜ್ಞಾನದ ಅಪಾರ ಶಕ್ತಿಯನ್ನು ಕೊಂಡಾಡಿದ್ದಾರೆ.ಆಧುನಿಕ ಪ್ರಪಂಚವು ಇಂದು ವಿಜ್ಞಾನ ಮತ್ತು ತಂತ್ರಜ್ಞಾನಗಳ ಯುಗವೆನಿಸಿದೆ. ಆಹಾರ, ಗಾಳಿ, ನೀರಿನಷ್ಟೇ ಇಂದು ವಿಜ್ಞಾನ,ಮಾಹಿತಿ ತಂತ್ರಜ್ಞಾನ ಇತ್ಯಾದಿಗಳು ಅತ್ಯಂತ ಅವಶ್ಯಕವೆನಿಸಿವೆ. ಪ್ರಾಚೀನ ಕಾಲದಿಂದಲೂ ಜನರ ಜೀವನಕ್ಕೆ ವಿಜ್ಞಾನ ಮತ್ತು ತಂತ್ರಜ್ಞಾನದ ನೆರವು ದೊರೆಯುತ್ತಲೇ ಬಂದಿದೆ. ಮಾನವ ಇದುವರೆಗೆ ಅಜ್ಞಾತವಾಗಿದ್ದ ಎಷ್ಟೋ ವಿಷಯಗಳನ್ನು ಮತ್ತು ಪ್ರಕೃತಿಯಲ್ಲಿ ಅಡಗಿರಬಹುದಾದ ಸಮಸ್ತ ರಹಸ್ಯಗಳನ್ನು ಅನಾವರಣಗೊಳಿಸಲು ಬಹುಮಟ್ಟಿಗೆ ಶಕ್ತನಾಗಿದ್ದಾನೆ. ಒಂದೇ ಮಾತಿನಲ್ಲಿ ಹೇಳಬಹುದಾದರೆ ವಿಜ್ಞಾನಿಗಳಿಗೆ ಅಗೋಚರವಾದ ಅಥವಾ ಅವರ ಅರಿವಿಗೆ ಬಾರದಿರುವ ಕ್ಷೇತ್ರಗಳು ಅತ್ಯಂತ ಕಡಿಮೆ. ಭೂಮಿಯ ಎಲ್ಲ ಕೌತುಕಗಳಿಗೆ,ಸಮಸ್ಯೆಗಳಿಗೆ ವಿಜ್ಞಾನ ಪರಿಹಾರವನ್ನು ನೀಡೇ ನೀಡುತ್ತದೆ ಎನ್ನಲು ಅಸಾಧ್ಯ. ಆದರೆ ಎಲ್ಲ ವಿಷಯಗಳ ಬಗ್ಗೆ ವಿಜ್ಞಾನದ ಹುಡುಕಾಟ ನಡೆಯುತ್ತಲೇ ಇರುತ್ತದೆ. ಇದು ಅನವರತ, ಅನಂತ.ಭಾರತದಲ್ಲಿಯೂ ವಿಜ್ಞಾನ ಹಾಗೂ ತಂತ್ರಜ್ಞಾನಕ್ಕೆ ಸಂಬಂದಿಸಿದ ಸಂಶೋಧನೆ ಪ್ರಾಚೀನ ಕಾಲದಿಂದಲೂ ಪರಿಚಿತವಾದ ಕ್ಷೇತ್ರಗಳೇ ಆಗಿದೆ. ಈಗಲೂ ಕೆಲವು ಸಂಗತಿಗಳು ಭಾರತೀಯ ಸಂಶೋಧನೆ ಎಂದೇ ಹೆಸರು ಪಡೆದಿದೆ. ಭೂಮಿ ಚಪ್ಪಟೆಯಾಗಿದ್ದು, ನಿಂತಲ್ಲೇ ನಿಂತಿರುತ್ತದೆ ಎಂದು ನಂಬಿಕೊಂಡಿದ್ದ ದಿನಗಳಲ್ಲಿ ಭೂಮಿ ದುಂಡಗಿದೆ, ಸೂರ್ಯನ ಸುತ್ತ ಸುತ್ತುತ್ತಿದೆ ಎಂಬ ತಿಳಿವಳಿಕೆ ಭಾರತೀಯರಲ್ಲಿತ್ತು. ಬಹುಶಃ ಮಾನವನ ಲೆಕ್ಕಾಚಾರಕ್ಕೆ ಅಡಿಪಾಯ ಕೊಟ್ಟಿದ್ದೇ ಸೊನ್ನೆಯ ಶೋಧನೆ. ಆರ್ಯಭಟ

ಪ್ರೊ. ಹೆಚ್. ಎ. ರಂಗನಾಥ್

ಕೊಟ್ಟ ಈ ಶೂನ್ಯ ಸಂಖ್ಯೆಯ ಮೇಲೆಯೇ ಇವತ್ತಿನ ಸಂಖ್ಯಾಶಾಸ್ತ್ರ ನಿಂತಿದೆ. ಸ್ವಾತಂತ್ರ್ಯ ಬಂದ ಮೇಲೆ ಅನೇಕ ಸಂಶೋದನಾ ಕೇಂದ್ರಗಳನ್ನು ಹಾಗೂ ಆ ವಿಷಯಗಳಲ್ಲಿ ತಂತ್ರಜ್ಞಾನವನ್ನು ಕೊಡುವ ಶಿಕ್ಷಣ ಕೇಂದ್ರಗಳನ್ನೂ ಸ್ಥಾಪಿಸಲಾಗಿದೆ. ಇದರ ಪರಿಣಾಮವಾಗಿ ಯಾವುದೇ ಭಾರತೀಯನು ಹೆಮ್ಮೆ ಪಡುವಷ್ಟರ ಮಟ್ಟಿಗೆ ವಿಜ್ಞಾನ,ತಂತ್ರಜ್ಞಾನ ಕ್ಷೇತ್ರ ಅಭಿವೃದ್ಧಿ ಸಾಧಿಸಿದೆ. ನೈಸರ್ಗಿಕ ವಿಜ್ಞಾನ ಮತ್ತು ತಂತ್ರಜ್ಞಾನ, ವ್ಯವಸಾಯ, ಪರಮಾಣು ಸಂಶೋಧನೆ, ಬಾಹ್ಯಾಕಾಶ ಸಂಶೋಧನೆ ಹಾಗೂ ರಕ್ಷಣಾ ಕ್ಷೇತ್ರ ಮುಂತಾದುವುಗಳ ಸಂಶೋಧನೆಯಲ್ಲಿ ಭಾರತೀಯರು ಅಪಾರವಾದ ಯಶಸ್ಸನ್ನು ಗಳಿಸಿದ್ದಾರೆ. ಆ ದಿಸೆಯಲ್ಲಿ ಪ್ರಯತ್ನ ಸತತವಾಗಿ ಸಾಗುತ್ತಿದೆ. ಆದರೆ ಈ ಕ್ಷೇತ್ರಗಳಲ್ಲಿ ಭಾರತ ಸಂಪೂರ್ಣ ಸ್ವಾವಲಂಬಿಯಲ್ಲ.

ಹಲವು ಕ್ಷೇತ್ರಗಳಲ್ಲಿ ಭಾರತವಿನ್ನೂ ಕೆಲಮಟ್ಟಿಗೆ ಪರಾವಲಂಬಿಯೇ. ಕೇಂದ್ರ ಸರ್ಕಾರ, ರಾಜ್ಯ ಸರ್ಕಾರ ಮತ್ತು ಖಾಸಗಿ ಸಂಸ್ಥೆಗಳು ವೈಜ್ಞಾನಿಕ ಸಂಶೋಧನಾ ಕೇಂದ್ರಗಳನ್ನು ಹೊಂದಿವೆ. ಇವೆಲ್ಲವೂ ದೇಶವನ್ನು ಅಭಿವೃದ್ಧಿ ಪಥದಲ್ಲಿ ಕೊಂಡೊಯ್ಯಲು ಸಹಕರಿಸುತ್ತಿವೆ. ಅತ್ಯಂತ ಕ್ಲಿಷ್ಟಕರ ಪರಿಸ್ಥಿತಿಯಲ್ಲೂ ಪರಾವಲಂಬಿಗಳಾಗದೆ ದೇಶದ ವೈಜ್ಞಾನಿಕ ತಂತ್ರಜ್ಞಾನದ ಅಗತ್ಯಗಳನ್ನು ಪೂರೈಸುವಷ್ಟು ಸಾಮರ್ಥ್ಯ ಪಡೆಯುವುದೇ ಭಾರತದ ಮುಖ್ಯ ಗುರಿಯಾಗಿದೆ. ವಿಜ್ಞಾನಿಗಳ ಎಲ್ಲ ಚಿಂತನೆಗಳೂ ಸಂಶೋಧನೆಯ ಫಲಗಳೂ ದೇಶದ ಜನಸಾಮಾನ್ಯರ ಬದುಕಿನಲ್ಲಿ ಬೀರಬೇಕಾದಷ್ಟು ಪರಿಣಾಮ ಬೀರಿದೆಯೇ ಎಂಬುದು ಪ್ರಶ್ನೆಯಾಗಿ ಉಳಿದಿದೆ. ವ್ಯವಸಾಯದ ಕ್ಷೇತ್ರದಲ್ಲಿ ನಮ್ಮ ವೈಜ್ಞಾನಿಕ ಮತ್ತು ತಾಂತ್ರಿಕ ಸಂಶೋಧನೆಗಳ ಪರಿಣಾಮವಾಗಿ ಇಂದು ನಾವು ಆಹಾರ ಧಾನ್ಯಗಳಲ್ಲಿ ಸ್ವಾವಲಂಬಿಗಳೂ ಮತ್ತು ಸ್ವಪರಿಪೂರ್ಣರೂ ಆಗಿರುತ್ತೇವೆ. ಇಂದು ನಾವು ಬರಗಾಲ, ಪ್ರವಾಹದಂತಹ ಪ್ರಕೃತಿ ವಿಕೋಪಗಳ ಸಮಯದಲ್ಲೂ ಕಂಗೆಡದಂತೆ ಅವುಗಳನ್ನು ಎದುರಿಸುವಷ್ಟು ಆಹಾರ ಧಾನ್ಯ ಸಂಗ್ರಹದಲ್ಲಿ ಸಮರ್ಥರಾಗಿದ್ದೇವೆ. ಇದರೊಂದಿಗೆ ನಾವು ಆಹಾರ ಧಾನ್ಯವನ್ನು ರಫ್ತು ಮಾಡುವ ಸ್ಥಿತಿಯಲ್ಲಿದ್ದೇವೆ. ಇದಕ್ಕೆಲ್ಲಾ ಕಾರಣ ನಮ್ಮ ವೈಜ್ಞಾನಿಕ ಸಂಶೋಧನೆ ಮತ್ತು ನಮ್ಮ ರೈತರು ನಮ್ಮ ತಂತ್ರಜ್ಞಾನದಲ್ಲಿಟ್ಟಿರುವ ನಂಬಿಕೆ ಹಾಗೂ ಅದರ ಸದುಪಯೋಗದಿಂದ ಸಾಧ್ಯವಾಯಿತೆಂದು ತಿಳಿಯಬಹುದು. ಆದರೂ ಈ ಕ್ಷೇತ್ರದಲ್ಲಿ ಸಾಂಪ್ರದಾಯಿಕ ಪದ್ಧತಿಗಳು ಬಿಟ್ಟುಹೋಗಿಲ್ಲ. ಈ ಬಗೆಯ ಅತ್ಯಾಧುನಿಕ ತಂತ್ರಜ್ಞಾನ ಹೊಂದಿ ದೇಶದ ಅಭಿವೃದ್ಧಿ ಸಾಧನೆಗೆ

*ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳುವುದು ಎಲ್ಲಾ ನಾಗರಿಕರ ಮೂಲಭೂತ ಕರ್ತವ್ಯ*

*ಪುಟ 3 ರಲ್ಲಿ ಮುಂದುವರೆದಿದೆ . . . .*

ನೆರವಾಗುತ್ತಿದ್ದರೂ ಸಾಧಿಸಬೇಕಾದುದು ಇನ್ನೂ ಎಷ್ಟೋ ಇವೆ. ನಮ್ಮ ಪ್ರಯೋಗಗಳು, ಸಂಶೋಧನೆಗಳು ಜನಸಾಮಾನ್ಯರನ್ನು ತಲುಪುವುದು ಅತಿ ಮುಖ್ಯವಾದುದು. ಸಾಮಾನ್ಯ ಜನರ ಜೀವನ ಸುಖಮಯವಾಗಿ ಅವರ ಬದುಕು ಹಸನು ಮಾಡುವುದೇ ವೈಜ್ಞಾನಿಕ ಮತ್ತು ತಂತ್ರಜ್ಞಾನದ ಮೂಲ ಉದ್ದೇಶವಾಗಿದೆ.

ವಿಜ್ಞಾನ ಮತ್ತು ತಂತ್ರಜ್ಞನ ಮಾನವನನ್ನು ದಾಸ್ಯದತ್ತ ಕೊಂಡೊಯ್ಯಬಾರದು. ಮಹಾತ್ಮ ಗಾಂಧೀಜಿಯವರು ವಿಜ್ಞಾನವನ್ನು ಒಪ್ಪಿಕೊಂಡಿರಲಿಕ್ಕಿಲ್ಲ ಎಂಬ ಕಾರಣಕ್ಕಾಗಿ ಅವರನ್ನು ವಿಜ್ಞಾನ ವಿರೋಧಿ ಎಂಬೊಂದು ಅಪಕಲ್ಪನೆ ಇದೆ. ಗಾಂಧೀಜಿ ಹೇಳಿದ ಏಳು ಸಾಮಾಜಿಕ ಪಾಪಗಳಲ್ಲಿ ವಿಜ್ಞಾನ ಐದನೆಯದ್ದು. ಅವರು ವಿಜ್ಞಾನದ ವಿರೋಧಿಯೇನಲ್ಲ, ಮಾನವೀಯತೆ ಇಲ್ಲದ ವಿಜ್ಞಾನ ಪಾಪ ಎಂದು ಅವರು ಪ್ರತಿಪಾದಿಸಿದರು. ಗಾಂಧೀಜಿಯವರಿಗೆ ತಕರಾರು ಇದ್ದದ್ದು ಯಂತ್ರಗಳು ಬರುವುದರ ಬಗ್ಗೆ ಅಲ್ಲ, ಆದರೆ ಅವುಗಳಿಂದ ಸೃಷ್ಟಿಯಾಗುವ ಅಸಮಾನತೆಯ ಬಗ್ಗೆ. ಹಿಂದ್ ಸ್ವರಾಜ್‌ನಲ್ಲಿ ನಾಗರಿಕತೆ ಕುರಿತು ಉತ್ತರಿಸುತ್ತಾ, ಅವರು ಹೇಳಿದ ಮಾತುಗಳು ಭವಿಷ್ಯ ನುಡಿದಂತೆ ಇವೆ. ಮನುಷ್ಯ ತಮ್ಮ ಕೈ–ಕಾಲುಗಳನ್ನು ಬಳಸಬೇಕಾಗಿ ಬರುವುದಿಲ್ಲ. ಒಂದು ಬಟನ್ ಒತ್ತಿದರೆ, ಉಡುಪು ತಮ್ಮಲ್ಲಿಗೆ ಬರುತ್ತದೆ. ಇನ್ನೊಂದು ಬಟನ್ ಒತ್ತಿದರೆ ನ್ಯೂಸ್ ಪೇಪರ್ ಬರುತ್ತದೆ,ಮೂರನೆಯ ಬಟನ್ ಒತ್ತಿದರೆ, ಕಾರು ಅವರಿಗಾಗಿ ಕಾಯುತ್ತಿರುತ್ತದೆ. ಬೇಕುಬೇಕಾದ್ದು ಮನುಷ್ಯನ ಎದುರು ಬರುತ್ತವೆ. ತಂತ್ರಜ್ಞಾನವನ್ನು ಚಟದಂತೆ ಅಂಟಿಸಿಕೊಂಡಿರುವ ಈ ಕಾಲದಲ್ಲಿ ಗಾಂಧಿ ಮಾತುಗಳು ಇಂದಿನ ಬದುಕಿನ ವಿಮರ್ಶೆಯಂತೆ ಕಾಣುತ್ತದೆ. ತಂತ್ರಜ್ಞಾನ ನಮ್ಮನ್ನು ಅಗಾಧವಾಗಿ ವ್ಯಾಪಿಸಿಕೊಂಡಿರುವ ಹೊತ್ತಿನಲ್ಲಿ ಮಹಾತ್ಮ ಗಾಂಧಿ ಅವರ ಮಾನವೀಯ ನೆಲೆಯಲ್ಲಿ ವಿಮರ್ಶಕ ದೃಷ್ಟಿಕೋನದ ಅಗತ್ಯವಿದೆ ಎನಿಸುತ್ತದೆ.

'ವಸುಧೈವ ಕುಟುಂಬಕಂ' ಎಂಬುದು ಸಾಧ್ಯವಾಗಬೇಕಾದರೆ ಮಾನವರ ದುರಾಸೆ ನಿಲ್ಲಬೇಕು, ಎಲ್ಲರಿಗೂ ಹಿತ ನೀಡುವ ವಿಜ್ಞಾನ ತಂತ್ರಜ್ಞಾನಗಳತ್ತ ಸಾಗಬೇಕು, ಮೊದಲು ಮಾನವನಾಗಬೇಕು, ಭೂಮಿಯ ಮೇಲಿನ ಸಕಲ ಜೀವಿಗಳ ಬಗ್ಗೆ ಪ್ರೀತಿ ತೋರುವುದನ್ನು ಬೆಳಸಿಕೊಳ್ಳಬೇಕು. ಹಾಗಾದಾಗ ಮಾತ್ರ ಭೂಮಿ ಸುಫಲೆ'ಯಾಗಿ, ಸಸ್ಯಶ್ಯಾಮಲೆಯಾಗಿ ಶೋಭಿಸುತ್ತಾಳೆ. ನಮ್ಮ ಇಂದಿನ ಎಲ್ಲ ಸಂಪನ್ಮೂಲ ಮುಂದಿನ ಪೀಳಿಗೆ ನಮಗಿತ್ತಿರುವ ಕೊಡುಗೆ, ಅದನ್ನು ಹಾಳುಗೆಡವದೇ ಇನ್ನಷ್ಟು ಉತ್ತಮವಾಗಿ ಅವರಿಗೆ ದಾಟಿಸುವುದು ನಮ್ಮ ಜವಾಬ್ದಾರಿ. ಈ ಸಂಪನ್ಮೂಲಗಳನ್ನು, ಹಿತಮಿತವಾಗಿ ಬಳಸುವುದಷ್ಟೇ ಅಲ್ಲದೇ ಅಭಿವೃದ್ಧಿ ಪಡಿಸುವುದನ್ನು ರೂಢಿಸಕೊಳ್ಳಬೇಕು. ಆದರೆ, ವಿಜ್ಞಾನ ಕಲಿತವರಲ್ಲಿಯೇ ಕೆಲವರು, ದೇಶ, ಜನಾಂಗಗಳನ್ನೇ ನಾಶಮಾಡುವ ತಂತ್ರಾಗಮದಲ್ಲಿ ತೊಡಗಿದ್ದಾರೆ. ಡಾ.ಕೆ ಶಿವರಾಮಕಾರಂತರು ಹೇಳುವಂತೆ "ಭಾರತದಲ್ಲಿ ವಾಸಿಸುವ ನಮಗೆ ಪರಿಸರವನ್ನು ಕುರಿತ ಜ್ಞಾನ ತೀರ ಕಡಿಮೆ. ಪಶು ಪಕ್ಷಿಗಳಿಗೂ, ಮಾನವ ಬಳಗಕ್ಕೂ ಏನು ಸಂಬಂಧವಿದೆಯೆಂದು ನಮಗಿನ್ನೂ ತಿಳಿದಿಲ್ಲ. ಆದರೂ ನಾವು ಬುದ್ಧನಿಂದ ಅಹಿಂಸಾ ಧರ್ಮದ ಬೋಧನೆ ಪಡೆದವರು! ನಮ್ಮ ಪುರಾತನ ಋಷಿಗಳು ಅತಿ ಸೂಕ್ಷ್ಮವಾದ ಜೀವಾಣುವಿನಲ್ಲಿಯೂ ಬ್ರಹ್ಮನಿದ್ದಾನೆ ಎಂದವರು. ಹೀಗೆ ಮತ ಧರ್ಮಗಳ ಪ್ರಭಾವ ನಮ್ಮ ಮೇಲೆ ವಿಪರೀತ ಬಿದ್ದುದರಿಂದಲೋ ಏನೋ. ಆ ಬ್ರಹ್ಮನನ್ನು ನಾವು ನಿಸರ್ಗದಲ್ಲಿ ಕಾಣಲು ಬಯಸುವುದಿಲ್ಲ! ಕಲಿಯುಗದಲ್ಲಿ ಬ್ರಹ್ಮನ ಬದಲು ದುಡ್ಡೇ ಸರ್ವಸ್ವ – ಎಂಬ ಆರಾಧನೆಗೆ ತೊಡಗಿದ್ದೇವೆ. ಪ್ರಕೃತಿ ಸಂಪತ್ತನ್ನು ನಾವು ಇಂದು ದೈನಂದಿನ ನಮ್ಮ ಲಾಭಕ್ಕಾಗಿ ಸುಲಿಯುತ್ತಿದ್ದೇವೆಯೇ ಹೊರತು, ನಾಳಿನ ಯೋಚನೆ ನಮಗಿಲ್ಲ ಎಂಬಂತೆ ವರ್ತಿಸುತ್ತಿದ್ದೇವೆ." ಆದ್ದರಿಂದ ವಿಜ್ಞಾನವನ್ನು ಸಕಲ ಜೀವರಾಶಿಯ ಒಳತಿಗಾಗಿ ಹೆಜ್ಜೆ ಇಡುವತ್ತ, ಬೆಳಕಿನತ್ತ ಸಾಗಿಸಬೇಕಿದೆ. ವಿಜ್ಞಾನ ತಿಳಿಸುವುದೇ ಎಲ್ಲಾ ಜೀವಿಗಳೊಡಗೂಡಿ ಬದುಕುವುದನ್ನು, ಪರಿಸರ ಸ್ನೇಹಿಯಾಗಿ ಬದುಕುವ ರೀತಿಯನ್ನು, ಸರಳ ಸಮೃದ್ಧಿ ಜೀವನವನ್ನು ಹಾಗೂ ನೆಮ್ಮದಿಯಾಗಿ ಸಹಬಾಳ್ವೆ ನಡೆಸುವುದನ್ನು. ವಿಜ್ಞಾನ ಬೋಧಿಸುವುದು ನೀನೂ ಬದುಕು, ಇತರ ಜೀವಿಗಳನ್ನು ಬದುಕಲು ಬಿಡು.

ಪ್ರಸ್ತುತ ಸಮಾಜ ವಿಜ್ಞಾನ ಹಾಗೂ ತಂತ್ರಜ್ಞಾನದ ಜಗತ್ತಿನಲ್ಲಿ ಬದುಕುತ್ತಿದ್ದರೂ ಅತೀ ಕಡಿಮೆ ಕಡಿಮೆ ಜನರಿಗೆ ಇದರ ಬಗೆಗೆ ತಿಳಿವಳಿಕೆ ಇದೆ ಹೀಗಾಗಿ ವಿಜ್ಞಾನಿಗಳು ಹೊಸ ಸಂಶೋಧನೆಗಳನ್ನು ಜನರಿಗೆ ತಲುಪಿಸುವ ಬಹುದೊಡ್ಡ ಸವಾಲನ್ನು ಎದುರಿಸುತ್ತಿದ್ದಾರೆ ಇಂದು ಸಾಮಾನ್ಯ ಜನರಿಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಬಗ್ಗೆ ಸಮರ್ಪಕವಾದ ತಿಳಿವಳಿಕೆ ಇಲ್ಲ. ಇತ್ತೀಚೆಗೆ ಕೋವಿಡ್–19ನ್ನು ಎದುರಿಸುವಲ್ಲಿ ನಮ್ಮ ಜನ ನಡೆದುಕೊಂಡ ರೀತಿ ಕೂಡ ಭಯವನ್ನು ಹುಟ್ಟಿಸುತ್ತದೆ. ಇದು ಭವಿಷ್ಯದಲ್ಲಿ ಅತ್ಯಂತ ಅಪಾಯಕಾರಿ ಏಕೆಂದರೆ ಜನಸಾಮಾನ್ಯರಿಗೆ ವಿಜ್ಞಾನ ಮತ್ತು ತಂತ್ರಜ್ಞಾನದ ಬಗೆಗೆ ಅರಿವು ಇಲ್ಲವೆಂದಾದರೆ ಭವಿಷ್ಯದಲ್ಲಿ ಜ್ವಲಂತ ಸಮಸ್ಯೆಗಳ ಕುರಿತಂತೆ ಜನರಿಗೆ ಪ್ರಜ್ಞೆಯೇ ಇಲ್ಲವೆಂದಾದರೆ ಭವಿಷ್ಯದಲ್ಲಿ ಕಾರ್ಮೋಡ ಕವಿಯಲಿದೆ ಎಂದೇ ಅರ್ಥ. ಆಲೋಚನೆ ಮಾಡದೇ ಮಾಹಿತಿ ವರ್ಗಾವಣೆ ಮಾಡುವಲ್ಲಿ ನಮ್ಮ ಜನ ನಿಪುಣರು.ಇದರಿಂದ ಸತ್ಯಕ್ಕಿಂತ ಹೆಚ್ಚಾಗಿ ಅಸತ್ಯವೇ ಹರಡುತ್ತಿದೆ.ಇಂಥ ಸಂಧರ್ಭದಲ್ಲಿ ಭವಿಷ್ಯದಲ್ಲಿ ಎದುರಾಗಬಹುದಾದ ಸವಾಲುಗಳನ್ನು ಹೇಗೆ ಬಗೆ ಹರಿಸಬೇಕು ಎಂಬುದು ವಿಜ್ಞಾನಿಗಳ ಸಮುದಾಯದ ಮುಂದೆ ಇರುವ ಬಹುದೊಡ್ಡ ಸವಾಲು. ಜನರನ್ನು ಸುಶಿಕ್ಷಿತಗೊಳಿಸುವುದೆಂದರೆ ಅದು ವಿಜ್ಞಾನ ಮತ್ತು ತಂತ್ರಜ್ಞಾನದ ಬಗೆಗೆ ಮಾಹಿತಿ ಬಿತ್ತುವುದು ಹಾಗೂ ವೈಜ್ಞಾನಿಕ ಅಂಕಿ–ಅಂಶ ಕುರಿತಂತೆ ಜನರಲ್ಲಿ ಪ್ರಜ್ಞೆ ಮೂಡಿಸುವುದು ಎಂದೇ ಅರ್ಥ. ವಿಜ್ಞಾನಿಗಳ ಕೆಲಸ ಬಹುಮುಖ್ಯವಾಗಿರುವುದು ಕೇವಲ ಸಂಶೋಧನೆ, ಅನುಷ್ಠಾನ ಹಾಗೂ ಜ್ಞಾನದ ವರ್ಗಾವಣೆ ಮಾತ್ರವಲ್ಲ ಬದಲಾಗಿ ವಿಜ್ಞಾನ ಹಾಗೂ ತಂತ್ರಜ್ಞಾನದಲ್ಲಿ ಆಗಿರುವ ಸಂಶೋಧನೆಗಳನ್ನು ಜನಸಾಮಾನ್ಯರಿಗೆ ತಿಳಿಯುವಂತೆ ಮಾಡುವುದು ವಿಜ್ಞಾನಿಗಳ ಮುಂದಿರುವ ಬಹುದೊಡ್ಡ ಸವಾಲಾಗಿದೆ. ಡಾ.ಎಚ್.ನರಸಿಂಹಯ್ಯ ತಮ್ಮ 'ವಿಜ್ಞಾನ ಮತ್ತು ಸಮಾಜ' ಎಂಬ ಪ್ರಬಂಧದಲ್ಲಿ ವಿವರಿಸಿರುವಂತೆ "ವಿಜ್ಞಾನಿಗಳು ತಮ್ಮ ಸಂಶೋಧನೆಗಳನ್ನು ಮುಂದುವರಿಸಿಕೊಂಡು ಹೋಗುವುದರ ಜೊತೆಗೆ ಬೇರೆ ಕೆಲವು ಕರ್ತವ್ಯಗಳನ್ನು ನಿರ್ವಹಿಸುವುದು ಅವಶ್ಯಕ. ವಿಜ್ಞಾನಿಗಳು ಹೆಚ್ಚಿನ ಶಿಕ್ಷಣವನ್ನು ಪಡೆದ ಧೀಮಂತರಾಗಿರುವುದರಿಂದ ಅವರು ತಮ್ಮ ಜ್ಞಾನವನ್ನು

*ಪುಟ 4 ರಲ್ಲಿ ಮುಂದುವರೆದಿದೆ . . . .*

*ಮಕ್ಕಳಲ್ಲಿ ಸಾಮಾಜಿಕವಾದ ಹಲವು ಪೂರ್ವಾಗ್ರಹಗಳಿರುತ್ತವೆ. ಅವುಗಳನ್ನು ಪರಿಶೀಲಿಸಿ ಸೂಕ್ತವಾದದ್ದನ್ನು ಉಳಿಸಿ ಹೊಸ ಮಾರ್ಗ ತೋರಿಸುತ್ತಾ ಸಮರ್ಥ ವ್ಯಕ್ತಿಯನ್ನಾಗಿ ಮಾಡುವುದರ ಜೊತೆಯಲ್ಲಿ ಭಾರತದ ಅಮೂಲ್ಯ ನಾಗರೀಕರನ್ನಾಗಿ ಸಜ್ಜುಗೊಳಿಸುವ ಕೆಲಸವನ್ನು ಮಾಡಬೇಕಾಗುತ್ತದೆ.*

*ಕೇವಲ ಸಂಶೋಧನೆ, ಅನುಷ್ಠಾನ ಹಾಗೂ ಜ್ಞಾನದ ವರ್ಗಾವಣೆ ಮಾತ್ರವಲ್ಲ ಬದಲಾಗಿ ವಿಜ್ಞಾನ ಹಾಗೂ ತಂತ್ರಜ್ಞಾನದಲ್ಲಿ ಆಗಿರುವ ಸಂಶೋಧನೆಗಳನ್ನು ಜನಸಾಮಾನ್ಯರಿಗೆ ತಿಳಿಯುವಂತೆ ಮಾಡುವುದು ವಿಜ್ಞಾನಿಗಳ ಮುಂದಿರುವ ಬಹುದೊಡ್ಡ ಸವಾಲಾಗಿದೆ.*

**ವಿಜ್ಞಾನ, ಸಮಾಜ ಮತ್ತು ವೈಜ್ಞಾನಿಕ ಮನೋಧರ್ಮ** ***ಮುಂದುವರೆದಿದೆ . . . . .***

ಸಾಮಾನ್ಯ ವ್ಯಕ್ತಿಗಳ ಮನೋಭಾವವನ್ನು ತಿದ್ದುವ ಕಾರ್ಯದಲ್ಲಿ ಉಪಯೋಗಿಸಿ, ಸಮಾಜದ ಸುಧಾರಣೆಗೆ ಸಹಾಯಕರಾಗಬೇಕು. ವಿಜ್ಞಾನದ ಮತ್ತು ವೈಜ್ಞಾನಿಕ ಮಾರ್ಗಗಳು ಜನಪ್ರಿಯವಾಗುವಲ್ಲಿ ವಿಜ್ಞಾನಿಯ ಪ್ರಾಮುಖ್ಯ ಬಹಳ ಹಿರಿದಾದುದು. ವಿಜ್ಞಾನಕ್ಕೆ ಸಂಬಂಧಿಸಿದಂತೆ ಮಾತೃಭಾಷೆಗಳಲ್ಲಿ, ಇಂಗ್ಲೀಷ್‌ನಲ್ಲಿ ಜನಪ್ರಿಯ ಲೇಖನಗಳನ್ನು ಬರೆಯುವುದು ಮತ್ತು ಉಪನ್ಯಾಸ ಕೊಡುವುದು ಈ ದಿಸೆಯಲ್ಲಿ ವಿಜ್ಞಾನಿಗಳು ಪ್ರಯತ್ನಿಸಬೇಕು. ವಿಜ್ಞಾನಿಯ ಮನೋಭಾವವು ಅವನು ದಂತಗೋಪುರದಲ್ಲಿರುವ ಅಪೂರ್ವ ಬುದ್ಧಿಶಾಲಿ ಎಂಬ ಭಾವನೆಯನ್ನು ಜನರಲ್ಲಿ ಉಂಟು ಮಾಡುವ ರೀತಿಯಲ್ಲಿ ಇರಬಾರದ್ದು. ಸಾಮಾನ್ಯ ಜನತೆ ವಿಜ್ಞಾನಿಯನ್ನು ವಿಶೇಷ ಜಾತಿಗೆ ಸೇರಿದ ಪ್ರಾಣಿ ಎಂದು ಅಂದುಕೊಳ್ಳುವಂತಾಗಬಾರದು. ಒಟ್ಟು ಸಮಾಜದ ದುಡಿಮೆಯಲ್ಲಿ, ಶಿಕ್ಷಣವನ್ನು ಪಡೆದಿರುವ ವಿಜ್ಞಾನಿ ಸಾಮಾನ್ಯ ಜನರ ಯೋಚನಾಶಕ್ತಿಯನ್ನು ಬೆಳೆಯಿಸುವಲ್ಲಿ ಶ್ರಮಿಸುವುದು ಆತನ ಕರ್ತವ್ಯವೇ ಹೊರತು ಉಪಕಾರವೇನೂ ಅಲ್ಲ. ಇಂತಹ ಸನ್ನಿವೇಶಗಳು ನಡೆಯುವ ಸಂದರ್ಭಗಳಲ್ಲಿ ಜನಪ್ರಿಯ ಉಪನ್ಯಾಸಗಳನ್ನು, ಉಪಯುಕ್ತ ವಿಜ್ಞಾನ ಪ್ರದರ್ಶನಗಳನ್ನು ಏರ್ಪಡಿಸಿದರೆ ವಿಜ್ಞಾನದಲ್ಲಿ ಆಸಕ್ತರಾಗಿರುವ ಬಹುಸಂಖ್ಯಾತ ವಿದಾರ್ಥಿಗಳಿಗೆ, ಸಾರ್ವಜನಿಕರಿಗೆ ಸಹಾಯಕವಾಗುತ್ತದೆ."

ವಿದೇಶದ ವಿಜ್ಞಾನಿಗಳು ನಮಗಿಂತ ಬಹುಮುಂದೆ ಹೋಗಿದ್ದಾರೆ. ಇದಕ್ಕೆ ಮುಖ್ಯ ಕಾರಣ, ಅವರು ಜನಸಾಮಾನ್ಯರಿಗೆ ಅರ್ಥವಾಗುವ ಭಾಷೆಯಲ್ಲಿ ವಿಜ್ಞಾನವನ್ನು ವಿವರಿಸಲು ವಿಶೇಷ ಪ್ರಯತ್ನ ಮಾಡದಿರುವುದು. ಅಷ್ಟೇ ಅಲ್ಲ ಸಾಮಾಜಿಕವಾಗಿಯೂ ತಮ್ಮನ್ನು ತೊಡಗಿಸಿಕೊಂಡಿದ್ದಾರೆ. ಭಾರತದಲ್ಲಿ ಜನಸಾಮಾನ್ಯರಿಗೆ ವಿಜ್ಞಾನದ ಅರಿವು ಮೂಡಿಸುವುದಷ್ಟೇ ಅಲ್ಲದೆ ಆಗಾಗ್ಗೆ ಹೊರಬಂದು ಸಾಮಾಜಿಕವಾಗಿ ತಮ್ಮನ್ನು ತೊಡಗಿಸಿಕೊಳ್ಳುವುದೂ ಮುಖ್ಯ. ಇತ್ತೀಚೆಗಂತೂ ಕೋವಿಡ್ ನಂಥ ವಿಚಾರಗಳಲ್ಲಿ ವಿಜ್ಞಾನಕ್ಕಿಂತ ಸಾಮಾಜಿಕ ಮಾಧ್ಯಮಗಳೇ ಸದ್ದು ಮಾಡುತ್ತಿವೆ. ಅದನ್ನು ಸತ್ಯಸ್ಯ ಸತ್ಯವೆಂದು ನಂಬಿಬಿಡುವ ಜನರೂ ಇದ್ದಾರೆ. ಇದರಿಂದ ಕೋವಿಡ್ ರೋಗಿಗಳ ಸಂಖ್ಯೆ ಏರುತ್ತಿದೆಯೇ ಹೊರತು ತಿಳಿವಳಿಕಸ್ಥರ ಸಂಖ್ಯೆ ಏರುತ್ತಿಲ್ಲ. ಇಂಥ ಹಲವು ಉದಾಹರಣೆಗಳನ್ನು ನೀಡಬಹುದು.

ನಮ್ಮ ವಿಜ್ಞಾನಿಗಳು ತಮ್ಮ ಪ್ರಯೋಗಾಲಯದಲ್ಲಿ ಕುಳಿತು ಸಂಶೋಧನೆ ನಡೆಸುವವರು. ತಮ್ಮ ಸಂಶೋಧನಾ ಫಲಿತಗಳನ್ನು ಇಂಗ್ಲೀಷ್ ಭಾಷೆಯಲ್ಲಿ ಪ್ರಕಟಿಸುತ್ತಾರೆ. ಅದು ಸರಿ, ಆದರೆ ಅದನ್ನೇ ದೇಶ ಭಾಷೆಗಳಲ್ಲಿ ಸಾಮಾನ್ಯರಿಗೆ ತಿಳಿವಂತೆ ಮಾಡಲು ಪ್ರಯತ್ನಿಸುವುದಿಲ್ಲ. ಜನಸಾಮಾನ್ಯರಿಗೆ ಅವುಗಳನ್ನು ವಿವರಿಸುವುದರಲ್ಲಿ ಅರ್ಥವಿಲ್ಲ ಎಂಬುದು ಬಹುತೇಕ ವಿಜ್ಞಾನಿಗಳ ತಿಳಿವಳಿಕೆ. ಇಲ್ಲಿ ನನಗೆ ಡಾ. ಶಿವರಾಮ ಕಾರಂತರ ನೆನಪಾಗುತ್ತದೆ. ಅವರು ಪ್ರಯೋಗಾಲಯದಲ್ಲಿ ಕೂತ ಹಲವು ಪದವಿಗಳನ್ನು ಪಡೆದ ವಿಜ್ಞಾನಿಯಲ್ಲ. ಅವರು ಮಕ್ಕಳಿಗಾಗಿ ಮೂರು ಸಂಪುಟಗಳ ಬಾಲಪ್ರಪಂಚ, ನಂತರ ಮೂರು ಸಂಪುಟಗಳ ವಿಜ್ಞಾನ ಪ್ರಪಂಚ ಹೊರತಂದರು. ಈ ಸಂಪುಟಗಳು ಕನ್ನಡ ವಿಜ್ಞಾನ ಸಾಹಿತ್ಯದ ಮೈಲಿಗಲ್ಲುಗಳು. ಶಿವರಾಮಕಾರಂತರು ಹಲವು ವಿಜ್ಞಾನ ಪುಸ್ತಕಗಳನ್ನು ಬರೆದರು. ಮನಸ್ಸಿಗೆ ಮುದ ನೀಡಿದ ಇಂಗ್ಲೀಷಿನ ವಿಜ್ಞಾನ ಪುಸ್ತಕ ದೊರೆತರೆ ಕನ್ನಡದ ಜನರಿಗಾಗಿ ಅನುವಾದಿಸಲು ಕಾರಂತರು ಮುಂದಾಗುತ್ತಿದ್ದರು. ಇಂಗ್ಲೀಷಿನಲ್ಲಿ ರಾಶೆಲ್ ಕಾರ್ಸನ್ ಸುಪ್ರಸಿದ್ಧ ಜನಪ್ರಿಯ ವಿಜ್ಞಾನ ಲೇಖಕರು. ಅವರ " The Sea Around Us" ಪುಸ್ತಕವನ್ನು ಓದಿದ ಕಾರಂತರಿಗೆ ಕನ್ನಡಕ್ಕೆ ಅನುವಾದಿಸುವ ಉತ್ಸಾಹ ಹುಟ್ಟಿತು. ಅದರ ಫಲವೇ "ನಮ್ಮ ಸುತ್ತಲಿನ ಕಡಲು", ನಂತರದ ದಿಗಳಲ್ಲಿ ಹಲವಾರು ಪುಸ್ತಕಗಳನ್ನು ಹೊರತಂದು ವಿಜ್ಞಾನ ಸಾಹಿತ್ಯ ಬೆಳೆಸಿದ್ದಾರೆ

ವಿಜ್ಞಾನದ ಬಗೆಗಿನ ತಿಳಿವಳಿಕೆಯಷ್ಟೇ ವೈಜ್ಞಾನಿಕ ಮನೋಭಾವವನ್ನು ಬೆಳೆಸಬೇಕಾದ ಜವಾಬ್ದಾರಿ ವಿಜ್ಞಾನಿಗಳದ್ದೂ ಆಗಿದೆ. ಈಗ ಈ ಪ್ರಯತ್ನವನ್ನು ವಿಜ್ಞಾನದ ಪದವಿ ಪಡೆಯದವರೇ ಹೆಚ್ಚು ಮಾಡುತ್ತಿದ್ದಾರೆ. ನಮ್ಮ ಭಾರತದ ಸಂವಿಧಾನದಲ್ಲೂ ವೈಜ್ಞಾನಿಕ ಮನೋಭಾವವನ್ನು ಬೆಳೆಸಿಕೊಳ್ಳುವುದು ಎಲ್ಲಾ ನಾಗರಿಕರ ಮೂಲಭೂತ ಕರ್ತವ್ಯ ಎಂದು ಹೇಳಿದೆ. ವೈಜ್ಞಾನಿಕ ಮನೋಭಾವ ಎನ್ನುವುದು ಒಂದು ಒಂದು ನಿಲುವು ಅಥವಾ ಜೀವನ ವಿಧಾನ. ಜ್ಞಾನವನ್ನು ಬಳಸಲು ಬುದ್ಧಿವಂತಿಕೆಯೂ ಬೇಕು ನೈತಿಕತೆಯೂ ಇರಬೇಕು. ವೈಜ್ಞಾನಿಕ ಮನೋಭಾವದ ಪ್ರಭಾವವು ನೇರವಾಗಿ ವಿಜ್ಞಾನದ ಮೇಲೆ ಹೆಚ್ಚಾಗಿ ಆಗುವುದಕ್ಕಿಂತಲೂ, ಸಮಾಜ ಮತ್ತು ಮಾನವರು ಯೋಚಿಸುವ, ಪ್ರತಿಕ್ರಿಯಿಸುವ ಅಥವಾ ವ್ಯವಹರಿಸುವ ವಿವಿಧ ವಿಧಾನ ಮೇಲೆ ಹೆಚ್ಚು ಪರಿಣಾಮವನ್ನು ಬೀರುತ್ತದೆ.

ಇಂದಿನ ಯುವಜನತೆ ವಿಜ್ಞಾನವನ್ನು ಒಂದು ಶೋಧದ, ಸೃಜನಶೀಲ ಚಟುವಟಿಕೆಯ ವಿಷಯವನ್ನಾಗಿ ಪರಿಗಣಿಸುವುದೇ ಇಲ್ಲ. ಅದು ಹಣ ಗಳಿಸಿಕೊಡುವ ಒಂದು ಮಾರ್ಗ ಮಾತ್ರವಾಗಿದೆ. ಇಂಜಿನಿಯರಿಂಗ್, ವೈದ್ಯಕೀಯ ಬಿಟ್ಟರೆ ಬದುಕೇ ಇಲ್ಲವೇನೋ ಎಂಬ ಧೋರಣೆ ಬೆಳೆದಿದೆ. ಸಹಜ ವಿಜ್ಞಾನದ ಕಡೆಗೆ ಗಮನ ನೀಡುವವರ ಸಂಖ್ಯೆ ಇಳಿಮುಖವಾಗಿದೆ. ವಿಜ್ಞಾನ ಎಂಬುದು ಪ್ರೀತಿಯ ವಸ್ತುವಾಗಲೇ ಇಲ್ಲ. ಇದಕ್ಕೆ ನಮ್ಮ ಶಿಕ್ಷಣ ಕ್ಷೇತ್ರ ಮತ್ತು ಸಾಮಾಜಿಕ ವ್ಯವಸ್ಥೆ ಕಾರಣವಾಗಿದೆ. ಇದರಿಂದ ಯುವಕರನ್ನು ಹೊರತರುವ ಕೆಲಸವಾಗಬೇಕಿದೆ.

ವೈಜ್ಞಾನಿಕ ಮನೋಧರ್ಮ ಎಲ್ಲರಿಗೂ ಅಗತ್ಯ. ಆದರೆ ವಿಶೇಷವಾಗಿ ವಿದ್ಯಾರ್ಥಿಗಳನ್ನು ಈ ಮನೋಧರ್ಮಕ್ಕೆ ಹೊಂದಿಸಬೇಕು. ಶಾಲೆಗೆ ಬರುವ ಮಕ್ಕಳಲ್ಲಿ ಸಾಮಾಜಿಕವಾದ ಹಲವು ಪೂರ್ವಾಗ್ರಹಗಳಿರುತ್ತವೆ. ಅವುಗಳನ್ನು ಪರಿಶೀಲಿಸಿ ಸೂಕ್ತವಾದದ್ದನ್ನು ಉಳಿಸಿ ಹೊಸ ಮಾರ್ಗ ತೋರಿಸುತ್ತಾ ಸಮರ್ಥ ವ್ಯಕ್ತಿಯನ್ನಾಗಿ ಮಾಡುವುದರ ಜೊತೆಯಲ್ಲಿ ಭಾರತದ ಅಮೂಲ್ಯ ನಾಗರೀಕರನ್ನಾಗಿ ಸಜ್ಜುಗೊಳಿಸುವ ಕೆಲಸವನ್ನು ಮಾಡಬೇಕಾಗುತ್ತದೆ. ವೈಜ್ಞಾನಿಕ ಮನೋವೃತ್ತಿ, ಮಾನವ ಹಿತಾಸಕ್ತಿ ಮತ್ತು ಅನ್ವೇಷಣೆ ಮತ್ತು ಸುಧಾರಣೆಯ ಮನೋಭಾವವನ್ನು ಬೆಳೆಸಿಕೊಳ್ಳುವುದು. ಇವು ನಮ್ಮ ಮೂಲಭೂತ ಕರ್ತವ್ಯಗಳಾಗಿವೆ. ಮಹಾಕವಿ ಕುವೆಂಪು ಅವರ ಮಾತು ಇಲ್ಲಿ ಗಮನಾರ್ಹವಾಗಿದೆ. "ಪ್ರತಿಯೊಂದು ಮಗುವೂ ಹುಟ್ಟುತ್ತಲೇ ವಿಶ್ವಮಾನವ, ಬೆಳೆಯುತ್ತಾ ನಾವು ಅದನ್ನು ಅಲ್ಪ ಮಾನವನನ್ನಾಗಿ ಮಾಡುತ್ತೇವೆ. ಮತ್ತೆ ಅದನ್ನು ವಿಶ್ವ ಮಾನವನನ್ನಾಗಿ ಮಾಡುವುದು ಶಿಕ್ಷಣದ ಕರ್ತವ್ಯವಾಗಬೇಕು". ವಿದ್ಯಾರ್ಥಿಗಳಿಗೆ ಒಮ್ಮೆ ವಿಜ್ಞಾನದಲ್ಲಿ ಆಸಕ್ತಿ ಮೂಡಿದರೆ ಅದು ಸುಲಭ ಹಾಗೂ ನಿಮ್ಮಲ್ಲಿ ಅನ್ವೇಷಿಸುವ, ಅನ್ವಯಿಸುವ ಸಾಮರ್ಥ್ಯವನ್ನು ಹೆಚ್ಚಿಸುತ್ತದೆ. ಇದು ಉನ್ನತ ವಿದ್ಯಾಭ್ಯಾಸದ ಹಂತದಲ್ಲಿ ಯಾವುದೇ ವಿಭಾಗದಲ್ಲಿ ಕಲಿತರೂ ಆ ವಿಷಯಗಳಲ್ಲಿ ಮೇಲೆ ಹೇಳಿದ ಎಲ್ಲ ಅಂಶಗಳನ್ನು ತೊಡಗಿಸಿಕೊಳ್ಳಲು ಸಹಾಯಕ.

ಜನರನ್ನು ಮೌಢ್ಯದಿಂದ ತಿಳಿವಳಿಕೆಯತ್ತ ತರಬೇಕಿದೆ. ವಿಜ್ಞಾನಿಗಳು ಈ ಕೆಲಸ ಮಾಡಬೇಕಿದೆ. ಡಾ. ಎಚ್ ನರಸಿಂಹಯ್ಯ ಅವರ ಮಾತನ್ನು ನೆನಪಿಸಬಯಸುತ್ತೇನೆ "ನಮ್ಮ ದೇಶವು ನೂರಾರು ವರ್ಷಗಳಿಂದ ಎದುರಿಸುತ್ತಿರುವ ಜಟಿಲವಾದ ಸಮಸ್ಯೆಗಳನ್ನು ವೈಜ್ಞಾನಿಕ ಮಾರ್ಗಗಳಿಂದ ಮಾತ್ರ ಪರಿಹರಿಸಲು ಸಾಧ್ಯ. ನಮ್ಮ ಸಮಾಜ ಎದುರಿಸುತ್ತಿರುವ ಜಾತಿಯಂತಹ ಸಾಮಾಜಿಕ ಪಿಡುಗುಗಳ ಪರಿಹಾರ ವಿಜ್ಞಾನ ಮತ್ತು ವೈಜ್ಞಾನಿಕ ಮನೋಭಾವಗಳಿಂದ ಮಾತ್ರ ಸಾಧ್ಯ. ಆಗ ಮಾತ್ರ ಮಾನವೀಯ ಮೌಲ್ಯ ಮತ್ತು ನೀತಿ ಅವಲಂಬಿತ ವಿಶ್ವಧರ್ಮ ರೂಪಿತವಾಗಬಹುದು. ಧರ್ಮವು ನೀತಿಸ್ವರೂಪವನ್ನು ಹೊಂದಿರುವಂತಹದು. ಆ ರೀತಿಯ ಧರ್ಮವು ರಾಷ್ಟ್ರೀತೆಯಗಳ ಮೂಲವಾದ ಬೇಲಿಯನ್ನು ದಾಟಿ ಸ್ಥಾಪಿತವಾಗಬೇಕಾದರೆ ವಿಶ್ವಮಾನ್ಯತೆಯನ್ನು ಹೊಂದಿರುವ ವಿಜ್ಞಾನದ ತತ್ವಗಳನ್ನು ಅನ್ವಯಿಸುವುದರಿಂದ ಮಾತ್ರ ಸಾಧ್ಯ. ವಿಜ್ಞಾನ ಮತ್ತು ಅದರ ಬಳಕೆಯು, ವೈಜ್ಞಾನಿಕ ಮನೋಧರ್ಮವನ್ನು ಪಡೆದು ಕಾರ್ಯ ಪ್ರವೃತ್ತವಾದರೆ ಬಡತನದ ನಿರ್ಮೂಲನ, ಶೋಷಣೆಯ ನಾಶ ಸಾಧ್ಯ. ಅದು ಪ್ರಗತಿವಿರೋಧಿ ಸಿದ್ಧಾಂತಗಳನ್ನು, ಸ್ವಹಿತಾಸಕ್ತಿಗಳನ್ನು ದೂರಮಾಡಬಲ್ಲದು. ವಿಜ್ಞಾನಿಗಳಾಗಿ ನಾವು ನಮ್ಮ ಆತ್ಮ ಸಾಕ್ಷಿಗೆ, ವಿಜ್ಞಾನಕ್ಕೆ ಹಾಗೂ ಅದರ ಮಾರ್ಗಗಳಿಗೆ ಪ್ರಾಮಾಣಿಕರಾಗಿರೋಣ. ಜೀವನೋಪಾಯ ಮಾರ್ಗವಾಗಿ ವಿಜ್ಞಾನ ಇರುವುದು ಬೇಡ. ನಮಗೆ ಅದರಲ್ಲಿ ಜೀವಂತ ನಂಬಿಕೆ ಇರಬೇಕು. ನಾವು ತರ್ಕಬದ್ಧವಾಗಿ ಧೈರ್ಯದಿಂದ ವರ್ತಿಸಿದಾಗ ಮಾತ್ರ ಸಮಾಜದ ಸುಧಾರಣೆ ಸಾಧ್ಯ."

**– ಪ್ರೊ ಎಚ್.ಎ.ರಂಗನಾಥ್**

ಸದಸ್ಯರು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

ಸಂದರ್ಶಕ ಪ್ರಾಧ್ಯಾಪಕರು, ಮಾನವ ತಳಿಶಾಸ್ತ್ರ ಕೇಂದ್ರ, ಬೆಂಗಳೂರು;

ಪೂರ್ವತನ ನಿರ್ದೇಶಕ, ರಾಷ್ಟ್ರೀಯ ರಾಷ್ಟ್ರೀಯ ಮೌಲ್ಯಂಕನ ಮತ್ತು ಮಾನ್ಯತಾ ಪರಿಷತ್ತು (ನ್ಯಾಕ್)

ಪೂರ್ವತನ ಕುಲಪತಿ, ಬೆಂಗಳೂರು ವಿಶ್ವವಿದ್ಯಾಲಯ

ಇ-ಮೇಲ್: haranganath@gmail.com

*(ಈ ಪ್ರಬಂಧದ ಕೆಲವು ವಿಷಯವನ್ನು ಕೆಲವು ಮೂಲಗಳಿಂದ ಸಂಗ್ರಹಿಸಲಾಗಿದೆ, ಆ ಎಲ್ಲ ಮೂಲ ಲೇಖಕರಿಗೆ ಈ ಪ್ರಬಂಧವನ್ನು ಓದಿ ತನ್ನ ಅಭಿಪ್ರಾಯ ಸೂಚಿಸಿದ ಗೆಳೆಯ ಡಾ.ಸತ್ಯನಾರಾಯಣ ಅವರಿಗೆ ಕೃತಜ್ಞತೆಗಳು)*

**ಪರಾಮರ್ಶನ ಗ್ರಂಥಗಳು:**


*ವಿಜ್ಞಾನ ಸಾಹಿತ್ಯದ ಅನುವಾದಗಳ ವೈವಿಧ್ಯ: ಶ್ರೀ ಟಿ.ಆರ್. ಅನಂತರಾಮು*
*ಪರಿಸರ ವಿಜ್ಞಾನ ಸಾಹಿತ್ಯ : ಶ್ರೀ ನಾಗೇಶ್ ಹೆಗಡೆ*
*ಕರ್ನಾಟಕದಲ್ಲಿ ಕೃಷಿ ವಿಜ್ಞಾನ: ಶ್ರೀ ಎಂ.ಸಿ. ಮಲ್ಲಿಕಾರ್ಜುನ*
*ಕನ್ನಡ ಸಾಹಿತ್ಯ ಪರಿಷತ್ತು ಮತ್ತು ವಿಜ್ಞಾನ ಪ್ರಸಾರ: ಶ್ರೀ ಎಸ್.ಎಲ್. ಶ್ರೀನಿವಾಸಮೂರ್ತಿ*
*ಕರ್ನಾಟಕ ರಾಜ್ಯ ವಿಜ್ಞಾನ ಪರಿಷತ್ತು : ಪ್ರೊ. ಕೆ.ಎಸ್. ನಟರಾಜ್*
*ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ: ಡಾ ಎ. ಎಂ. ರಮೇಶ್*
*ಮಾಹಿತಿ ತಂತ್ರಜ್ಞಾನ– ಒಂದು ಸ್ಥೂಲ ನೋಟ: ಶ್ರೀ ಜಿ.ಎನ್. ನರಸಿಂಹಮೂರ್ತಿ*
*ಸಾಮಾಜಿಕ ಜಾಲತಾಣಗಳು ಮತ್ತು ಸಾಮಾಜಿಕ ಪರಿಣಾಮ: ಶ್ರೀ ಅವಿನಾಶ್ ಬೈಪಾಡಿತ್ತಾಯ*
*ಸಮಗ್ರ ಗದ್ಯ (ಸಂಪುಟ 1 ಮತ್ತು 2): ರಾಷ್ಟ್ರ ಕವಿ ಕುವೆಂಪು*
*ಸ್ಮೃತಿಪಟಲದಿಂದ (1,2,3): ಡಾ ಶಿವರಾಮ ಕಾರಂತ*
*ಗಾಂಧೀಜೀಯವರ ಆತ್ಮ ಚರಿತ್ರೆ - ಸತ್ಯಶೋಧನೆ: ಅನುವಾದ– ಶ್ರೀ ಬೆಟಗೇರಿ ಕೃಷ್ಣ ಶರ್ಮ*
*ತೆರೆದ ಮನ: ಡಾ ಎಚ್.ನರಸಿಂಹಯ್ಯ*
*ಸಮಗ್ರ ಕಾವ್ಯ: ಡಾ ಜಿ.ಎಸ್.ಶಿವರುದ್ರಪ್ಪ*


## ಅಕಾಡೆಮಿಯು 2019–'20ನೇ ಸಾಲಿನಲ್ಲಿ ಹಮ್ಮಿಕೊಂಡ ಕಾರ್ಯಕ್ರಮಗಳ ಪಕ್ಷಿ ನೋಟ

### ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ಸಮ್ಮೇಳನಗಳು

| ಸ್ಥಳ | ಕೇಂದ್ರ ವಿಷಯ | ದಿನಾಂಕ | ಸಹಯೋಗ ಸಂಸ್ಥೆ | ಫಲಾನುಭವಿಗಳು |
|---|---|---|---|---|
| **ಬೆಂಗಳೂರು** | ಜೀವ, ರಸಾಯನ ಮತ್ತು ಆರೋಗ್ಯ ವಿಜ್ಞಾನಗಳು | 2019ರ ಅಕ್ಟೋಬರ್ 24–26 | ರಾಮಯ್ಯ ಕಲೆ, ವಿಜ್ಞಾನ ಮತ್ತು ವಾಣಿಜ್ಯ ಕಾಲೇಜು, ಬೆಂಗಳೂರು | 700 ಪ್ರತಿನಿಧಿಗಳು<br>300 ಸಂಶೋಧನಾ ಪೋಸ್ಟರ್‌ಗಳು |
| **ಧಾರವಾಡ** | ಗಣಿತ ವಿಜ್ಞಾನ ಮತ್ತು ಅದರ ಅನ್ವಯಿಕಗಳು | 2019ರ ನವೆಂಬರ್ 07 ಮತ್ತು 08 | ಕರ್ನಾಟಕ ವಿಶ್ವವಿದ್ಯಾಲಯ | 600 ಪ್ರತಿನಿಧಿಗಳು<br>200 ಸಂಶೋಧನಾ ಪೋಸ್ಟರ್‌ಗಳು |
| **ಮೈಸೂರು** | ರಸಾಯನ ವಿಜ್ಞಾನದಲ್ಲಿ ಹೊಸ ಆವಿಷ್ಕಾರಗಳು | 2020ರ ಜನವರಿ 30–31 | ಮೈಸೂರು ವಿಶ್ವವಿದ್ಯಾಲಯ | 500 ಪ್ರತಿನಿಧಿಗಳು<br>170 ಸಂಶೋಧನಾ ಪೋಸ್ಟರ್‌ಗಳು |
| **ಬೀದರ್** | ಭೌತಶಾಸ್ತ್ರ ಹಾಗೂ ಸಂಬಂಧಿತ ವಿಜ್ಞಾನ ವಿಷಯಗಳು | 2020ರ ಮಾರ್ಚ್ 11–13 | ಬಿ.ವಿ. ಭೂಮರಡ್ಡಿ ಪದವಿ ಮಹಾವಿದ್ಯಾಲಯ, ಬೀದರ್ | 500 ಪ್ರತಿನಿಧಿಗಳು<br>120 ಸಂಶೋಧನಾ ಪೋಸ್ಟರ್‌ಗಳು |

*ಐದು ಸಮ್ಮೇಳನಗಳು*

*2800 ಫಲಾನುಭವಿಗಳು*

*790 ಪೋಸ್ಟರ್ ಪ್ರದರ್ಶನ*

### ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನ

ಅಕಾಡೆಮಿಯ ವತಿಯಿಂದ ಪ್ರತಿ ವರ್ಷ ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನವನ್ನು ನಡೆಸಿಕೊಂಡು ಬರಲಾಗುತ್ತಿದೆ. ತೃತೀಯ ಸಮ್ಮೇಳನವನ್ನು "ವಿಜ್ಞಾನ ಮತ್ತು ತಂತ್ರಜ್ಞಾನ ಹೊಸ ಆಯಾಮಗಳು" ಎಂಬ ಕೇಂದ್ರ ವಿಷಯದ ಮೇಲೆ 2020ರ ಫೆಬ್ರವರಿ 18 ಮತ್ತು 19 ರಂದು ಬಿ.ಎಲ್.ಡಿ.ಇ ಸಂಸ್ಥೆಯ ಎಸ್. ಬಿ. ಕಲಾ ಮತ್ತು ಕೆ.ಸಿ.ಪಿ. ವಿಜ್ಞಾನ ಮಹಾವಿದ್ಯಾಲಯದ ವಿಜಯಪುರದಲ್ಲಿ ಯಶಸ್ವಿಯಾಗಿ ಆಯೋಜಿಸಲಾಯಿತು. ರಾಜ್ಯದ ವಿವಿಧ ಜಿಲ್ಲೆಗಳಿಂದ ಒಟ್ಟು 500 ಪ್ರತಿನಿಧಿಗಳು ಈ ಸಮ್ಮೇಳನದಲ್ಲಿ ಭಾಗವಹಿಸಿದ್ದರು. ಭೌತ ವಿಜ್ಞಾನ, ರಸಾಯನ ಮತ್ತು ಜೀವ ವಿಜ್ಞಾನಗಳಿಗೆ ಸಂಬಂಧಿಸಿದ ಸುಮಾರು 100 ಕ್ಕೂ ಹೆಚ್ಚು ಸಂಶೋಧನಾ ಪ್ರಾತ್ಯಕ್ಷಿಕೆಗಳನ್ನು ಕನ್ನಡದಲ್ಲಿ ಮಂಡಿಸಲಾಯಿತು.

### ವಿಜ್ಞಾನ ಲೋಕ ದ್ವೈಮಾಸಿಕ ಸಂಚಿಕೆ

ಅಕಾಡೆಮಿಯು ಕನ್ನಡದಲ್ಲಿ 2007ರ ಆಗಸ್ಟ್ ಮಾಹೆಯಿಂದ ನಿರಂತರವಾಗಿ ಪ್ರಕಟಿಸುತ್ತಿದೆ. ಪ್ರತಿ ಸಂಚಿಕೆಯ ತಲಾ 2000 ಪ್ರತಿಗಳನ್ನು ಮುದ್ರಿಸಿ, ರಾಜ್ಯದ ವಿವಿಧ ಪದವಿ ಪೂರ್ವ ಮತ್ತು ಪದವಿ ವಿಜ್ಞಾನ ಕಾಲೇಜು, ವಿಜ್ಞಾನ ಕೇಂದ್ರಗಳು, ಗ್ರಂಥಾಲಯಗಳಿಗೆ ಉಚಿತವಾಗಿ ವಿತರಿಸಲಾಗಿದೆ. ಎಲ್ಲಾ ಸಂಚಿಕೆಗಳು ಅಕಾಡೆಮಿಯ ವೆಬ್ ಸೈಟ್ ನಲ್ಲಿ www.kstacademy.in ನಲ್ಲಿ ಲಭ್ಯವಿದೆ.

*ವಿಜ್ಞಾನ ಲೋಕ ದ್ವೈಮಾಸಿಕದ 6 ಸಂಚಿಕೆಗಳು ಬಿಡುಗಡೆ; ಪ್ರತಿ ಸಂಚಿಕೆಯ 1950 ಪ್ರತಿಗಳು ಉಚಿತವಾಗಿ ವಿತರಣೆ*

*1200 ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳು ವಿಶೇಷ ಉಪನ್ಯಾಸಮಾಲೆಯಲ್ಲಿ ಭಾಗಿ*

*330 ಶಿಬಿರಾರ್ಥಿಗಳಿಗೆ ವಿಜ್ಞಾನ ಮತ್ತು ಇಂಜಿನಿಯರಿಂಗ್ ಸರ್ಟಿಫಿಕೇಟ್*

### ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ ವಿಜ್ಞಾನ ವಿಶೇಷ ಉಪನ್ಯಾಸ ಮಾಲೆ/ ವಿಶೇಷ ಕಾರ್ಯಾಗಾರ

ಆಧುನಿಕ ವೈಜ್ಞಾನಿಕ ಸಂಶೋಧನೆಯ ಬಗ್ಗೆ ತಮ್ಮ ಜ್ಞಾನಪರಿಧಿಯನ್ನು ವಿಸ್ತರಿಸಿಕೊಳ್ಳಲು ಹಾಗೂ ಸಂಶೋಧನೆ ಮತ್ತು ಅಭಿವೃದ್ಧಿಯಲ್ಲಿ ತಮ್ಮ ವೃತ್ತಿ ಜೀವನವನ್ನು ಕಂಡುಕೊಳ್ಳಲು ಅನುವು ಮಾಡಿಕೊಡಲು ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ 2–3 ದಿನಗಳ ಉಪನ್ಯಾಸ ಮಾಲೆಯನ್ನು ನಡೆಸಲಾಗುತ್ತಿದೆ. 2019–'20ನೇ ಸಾಲಿನಲ್ಲಿ 09 ಕಾರ್ಯಕ್ರಗಳನ್ನು ನಡೆಸಲಾಗಿದ್ದು, ರಾಜ್ಯದ ವಿವಿಧ ವಿಶ್ವವಿದ್ಯಾನಿಲಯಗಳ ಒಟ್ಟು 1200 ವಿದ್ಯಾರ್ಥಿಗಳು ಇದರ ಸದುಪಯೋಗವನ್ನು ಪಡೆದುಕೊಂಡಿದ್ದಾರೆ.

### ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿಷಯಗಳಲ್ಲಿ ಸರ್ಟಿಫಿಕೇಟ್ ಕೋರ್ಸ್‌ಗಳು

ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿದ್ಯಾರ್ಥಿಗಳು, ಯುವ ಸಂಶೋಧಕರು ಮತ್ತು ಬೋಧಕರಿಗಾಗಿ ಇಂಟೆಲೆಕ್ಚುಯಲ್ ಪ್ರಾಪರ್ಟಿರೈಟ್ಸ್, ಇಂಟಿಗ್ರೇಟೆಡ್ ಫಾರ್ಮಿಂಗ್ ಫಾರ್ ಫಾರ್ಮರ್ಸ್ ಮತ್ತು ಆರ್ಟಿಫಿಷಿಯಲ್ ಇಂಟೆಲಿಜೆನ್ಸ್ & ರೊಬೋಟಿಕ್ಸ್ ಬಗ್ಗೆ ಸರ್ಟಿಫಿಕೇಟ್ ಕೋರ್ಸ್‌ಗಳನ್ನು ನಡೆಸಲಾಗಿದ್ದು, ಒಟ್ಟು 330 ಶಿಬಿರಾರ್ಥಿಗಳು ಈ ಕಾರ್ಯಕ್ರಮದ ಪ್ರಯೋಜನವನ್ನು ಪಡೆದಿದ್ದಾರೆ

### ವಿಭಾಗ ಮತ್ತು ರಾಜ್ಯ ಮಟ್ಟದ ನಾಟಕ, ಗಣಿತ, ಚಿತ್ರಕಲೆ/ಪೈಂಟಿಂಗ್ ಹಾಗೂ ಪ್ರಬಂಧ ಸ್ಪರ್ಧೆ

ಅಕಾಡೆಮಿಯ ವತಿಯಿಂದ ಮೊಟ್ಟ ಮೊದಲ ಬಾರಿಗೆ ವಿಜ್ಞಾನ ಪದವಿ ವಿದ್ಯಾರ್ಥಿಗಳಿಗೆ ವಿಭಾಗ ಮತ್ತು ರಾಜ್ಯ ಮಟ್ಟಗಳಲ್ಲಿ ವಿಜ್ಞಾನ ನಾಟಕ, ಗಣಿತ ಮಾಡಲ್, ಗಣಿತ ರಸಪ್ರಶ್ನೆ ಮತ್ತು ಚಿತ್ರಕಲೆ/ಪೈಂಟಿಂಗ್ ಸ್ಪರ್ಧೆಗಳನ್ನು ಹಾಗೂ ಪದವಿ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿಗೆ ಕನ್ನಡ ಪ್ರಬಂಧ ಸ್ಪರ್ಧೆಯನ್ನು ಯಶಸ್ವಿಯಾಗಿ ಆಯೋಜಿಸಲಾಯಿತು. ಮೊದಲಿಗೆ ರಾಜ್ಯದ ನಾಲ್ಕು ವಿಭಾಗಗಳಾದ ಬೆಂಗಳೂರು, ಮೈಸೂರು, ಕಲಬುರಗಿ ಮತ್ತು ಬೆಳಗಾವಿ ವಿಭಾಗಗಳಲ್ಲಿ ವಿಭಾಗ ಮಟ್ಟದ ಸ್ಪರ್ಧೆಗಳನ್ನು ಆಯೋಜಿಸಿ, ನಂತರ ರಾಜ್ಯ ಮಟ್ಟದ ಸ್ಪರ್ಧೆಯನ್ನು 2020ರ ಮಾರ್ಚ್ 6–7 ರಂದು ಬೆಂಗಳೂರಿನಲ್ಲಿ ಅಕಾಡೆಮಿ ಕಛೇರಿಯಲ್ಲಿ ನಡೆಸಲಾಯಿತು. ರಾಜ್ಯದ ನಾಲ್ಕು ವಿಭಾಗಗಳಿಂದ ವಿಭಾಗಮಟ್ಟದಲ್ಲಿ ವಿಜೇತರಾದ 162 ವಿದ್ಯಾರ್ಥಿಗಳು ವಿವಿಧ ಸ್ಪರ್ಧೆಗಳಲ್ಲಿ ಭಾಗವಹಿಸಿದ್ದರು.

### ವಿಶೇಷ ಚೇತನರಿಗೆ ವಿಜ್ಞಾನ ಕಾರ್ಯಕ್ರಮಗಳು

ವಿಶೇಷ ಚೇತನ ವಿದ್ಯಾರ್ಥಿಗಳು ತಮ್ಮ ಪ್ರತಿಭೆಯನ್ನು ಪ್ರದರ್ಶಿಸಲು ಒಂದು ವೇದಿಕೆಯನ್ನು ಕಲ್ಪಿಸಲು ಹಾಗೂ ಅವರಲ್ಲಿ ಆತ್ಮವಿಶ್ವಾಸ ಮತ್ತು ಮನೋಸ್ಥೈರ್ಯವನ್ನು ತುಂಬಲು 2019–'20ನೇ ಆರ್ಥಿಕ ವರ್ಷದಲ್ಲಿ ವಿಶೇಷ ಚೇತನ ವಿದ್ಯಾರ್ಥಿಗಳಿಗೆ ರಸಪ್ರಶ್ನೆ ಸ್ಪರ್ಧೆ ಮತ್ತು ಇತರೆ ಸ್ಪರ್ಧೆಗಳನ್ನು ಸಮರ್ಥನಂ ಟ್ರಸ್ಟ್, ಬೆಂಗಳೂರು ಮತ್ತು ಧಾರವಾಡ ಪ್ರಾದೇಶಿಕ ವಿಜ್ಞಾನ ಕೇಂದ್ರ, ಧಾರವಾಡ ಇವರ ಸಹಯೋಗದಲ್ಲಿ ನಡೆಸಲಾಯಿತು.

### ಇತರೆ ಕಾರ್ಯಕ್ರಮಗಳು

- ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ದಿನಾಚರಣೆ: ಅಕಾಡೆಮಿಯ ವತಿಯಿಂದ ಅಂತಾರಾಷ್ಟ್ರೀಯ ಜೀವ ವೈವಿಧ್ಯತೆ ದಿನಾಚರಣೆ, ಅಂತಾರಾಷ್ಟ್ರೀಯ ಓಜೋನ್ ಪದರ ರಕ್ಷಣೆ, ಇಂಜಿನಿಯರ್ಸ್ ಡೇ ಮತ್ತು ಹೈಡ್ರೋಜನ್ ಬಾಂಡಿಂಗ್ ಶತಮಾನೋತ್ಸವಗಳನ್ನು 2019–20ನೇ ಸಾಲಿನಲ್ಲಿ ಆಚರಿಸಲಾಯಿತು.
- ಪ್ರೌಢಶಾಲಾ ವಿದ್ಯಾರ್ಥಿಗಳಲ್ಲಿ ಆವಿಷ್ಕಾರಕ ಮನೋಭಾವನೆಯನ್ನು ಗುರುತಿಸಿ ಪ್ರೋತ್ಸಾಹಿಸುವ ಸಲುವಾಗಿ 2020ರ ಜನವರಿ 18 ರಂದು ಸ್ಪ್ರಿಂಗ್ 2020 – ವಿಜ್ಞಾನ ಮಾಡಲ್ ಪ್ರದರ್ಶನ ಸ್ಪರ್ಧೆಯನ್ನು ಎಗ್ಗ್–ಹೆಡ್ಸ್ ಪ್ರೈ. ಲಿ., ಬೆಂಗಳೂರು ಇವರ ಸಹಯೋಗದಲ್ಲಿ ಅಕಾಡೆಮಿ ಕಛೇರಿಯಲ್ಲಿ ಏರ್ಪಡಿಸಲಾಗಿತ್ತು.
- ನ್ಯಾನೋ ಜಾತಾ ಕಾರ್ಯಕ್ರಮ: ಅಕಾಡೆಮಿಯ ವತಿಯಿಂದ ಸೆಂಟರ್ ಫಾರ್ ನ್ಯಾನೋ ಸೈನ್ಸ್ ಅಂಡ್ ಸಾಫ್ಟ್ ಮ್ಯಾಟರ್ ಸೈನ್ಸ್ (ಸಿ.ಇ.ಎನ್.ಎಸ್) ಮತ್ತು ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (ಕೆಸ್ಟೆಪ್ಸ್) ರವರ ಸಹಯೋಗದಲ್ಲಿ 2020ರ ಜನವರಿ 21 ರಂದು ನ್ಯಾನೋ ಜಾತಾ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಈ ನ್ಯಾನೊ ಜಾತಾ ಕಾರ್ಯಕ್ರಮದಲ್ಲಿ ಖ್ಯಾತ ವಿಜ್ಞಾನಿಗಳಿಂದ ನ್ಯಾನೋ ತಂತ್ರಜ್ಞಾನಕ್ಕೆ ಸಂಬಂಧಿಸಿದ ಎರಡು ಉಪನ್ಯಾಸಗಳನ್ನು ಹಾಗೂ ನ್ಯಾನೊ ಕಿಟ್‌ನ ಪ್ರದರ್ಶನ, ಹ್ಯಾಂಡ್ಸ್–ಆನ್ ತರಬೇತಿ ಹಾಗೂ ರಸಪ್ರಶ್ನೆ ಸ್ಪರ್ಧೆಯನ್ನೂ ಆಯೋಜಿಸಲಾಗಿತು
- ಸ್ಮಾಲ್ ಗ್ರಾಂಟ್ಸ್: ವಿದ್ಯಾರ್ಥಿಗಳಲ್ಲಿ ವೈಜ್ಞಾನಿಕ ಅರಿವು ಮೂಡಿಸುವ ಮತ್ತು ವಿಜ್ಞಾನವನ್ನು ಜನಪ್ರಿಯಗೊಳಿಸುವ ನಿಟ್ಟಿನಲ್ಲಿ ಅಕಾಡೆಮಿಯ ವತಿಯಿಂದ ವಿಜ್ಞಾನ ಪ್ರೋತ್ಸಾಹಕ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಶೈಕ್ಷಣಿಕ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಹಾಗೂ ಇತರೆ ಸಂಘ ಸಂಸ್ಥೆಗಳಿಗೆ ಅಲ್ಪ ಮೊತ್ತದ ಅನುದಾನ ನೀಡಿ ಪ್ರೋತ್ಸಾಹಿಸಲಾಗುತ್ತಿದೆ.

## ಅಕಾಡೆಮಿ ಸಭೆಗಳು

**ಕಾರ್ಯಕಾರಿ ಸಮಿತಿ ಸಭೆ:** ಅಕಾಡೆಮಿಯ 9ನೇ ಕಾರ್ಯಕಾರಿ ಸಮಿತಿ ಸಭೆಯನ್ನು ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಎಸ್. ಅಯ್ಯಪ್ಪನ್ ರವರ ಅಧ್ಯಕ್ಷತೆಯಲ್ಲಿ 2020ರ ಮೇ 11 ರಂದು ಬೆಳಗ್ಗೆ 11:30 ರಿಂದ ರಿಂದ ಮದ್ಯಾಹ್ನ 1:30ರವರೆಗೆ ಕೋವಿಡ್19 ಪಿಡುಗಿನ ನಿರ್ಬಂಧಗಳ ಕಾರಣ ವೀಡಿಯೊ ಕಾನ್ಫರೆನ್ಸ್ ಮೂಲಕ ನಡೆಸಲಾಯಿತು.

**ಸರ್ವ ಸದಸ್ಯರ ಸಭೆ:** ಅಕಾಡೆಮಿಯ 10ನೇ ಸರ್ವ ಸದಸ್ಯರ ಸಭೆಯನ್ನು ಅಕಾಡೆಮಿಯ ಅಧ್ಯಕ್ಷರಾದ ಪ್ರೊ. ಎಸ್. ಅಯ್ಯಪ್ಪನ್ ರವರ ಅಧ್ಯಕ್ಷತೆಯಲ್ಲಿ 2020ರ ಮೇ 27 ರಂದು ಬೆಳಗ್ಗೆ 11:30 ರಿಂದ ಮದ್ಯಾಹ್ನ 2:00ರವರೆಗೆ ಕೋವಿಡ್19 ಪಿಡುಗಿನ ನಿರ್ಬಂಧಗಳ ಕಾರಣ ವೀಡಿಯೊ ಕಾನ್ಫರೆನ್ಸ್ ಮೂಲಕ ನಡೆಸಲಾಯಿತು.

## ಅಕಾಡೆಮಿಯು 2020–'21ನೇ ಸಾಲಿನ ಯೋಜಿತ ಕಾರ್ಯಕ್ರಮಗಳು

**ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ ವಾರ್ಷಿಕ ಸಮ್ಮೇಳನ:** ಪ್ರಚಲಿತ ಕೇಂದ್ರ ವಿಷಯದ ಮೇಲೆ ಬೆಂಗಳೂರಿನಲ್ಲಿ ನವೆಂಬರ್ 2020 ರಿಂದ ಜನವರಿ 2021 ಅವಧಿಯಲ್ಲಿ ನಡೆಸಲಾಗುವುದು.

**ಕನ್ನಡದಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನ ಸಮ್ಮೇಳನ:** ಕನ್ನಡದಲ್ಲಿ ನಾಲ್ಕನೇ ಸಮ್ಮೇಳನವನ್ನು ನವೆಂಬರ್ 2020 ಮಾಹೆಯಲ್ಲಿ ಆಯೋಜಿಸಲಾಗುವುದು.

**ಅಕಾಡೆಮಿ ಪ್ರಶಸ್ತಿ/ಪುರಸ್ಕಾರಗಳು:**

- **ಜೀವಮಾನ ಸಾಧನೆ ಪ್ರಶಸ್ತಿ** : ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದಲ್ಲಿ ಶ್ರೇಷ್ಠ ಸಾಧನೆ ಮಾಡಿರುವ ಹಾಗೂ ನಮ್ಮ ರಾಷ್ಟ್ರದಲ್ಲಿ ಅವುಗಳ ಬೆಳವಣಿಗೆಗೆ ಅನನ್ಯ ಕೊಡುಗೆ ನೀಡಿರುವ ರಾಜ್ಯದ ಶ್ರೇಷ್ಠ ವಿಜ್ಞಾನಿಯೊಬ್ಬರಿಗೆ ಜೀವಮಾನ ಸಾಧನೆ ಪ್ರಶಸ್ತಿ ನೀಡಿ ಸನ್ಮಾನಿಸಿಕೊಂಡು ಬರಲಾಗುತ್ತಿದ್ದು, ಅಕಾಡೆಮಿಯ ವಾರ್ಷಿಕ ಸಮ್ಮೇಳನದಲ್ಲಿ ಆಯ್ಕೆ ಮಾಡಿದ ಶ್ರೇಷ್ಠ ವಿಜ್ಞಾನಿಗೆ ಸನ್ಮಾನ ಮತ್ತು ಪ್ರಶಸ್ತಿ ನೀಡಲಾಗುವುದು.
- **ವಿಜ್ಞಾನ ಸಂವಹನ ಜೀವಮಾನ ಸಾಧನೆ ಪ್ರಶಸ್ತಿ:** ಕನ್ನಡದಲ್ಲಿ ವಿಜ್ಞಾನ ಪ್ರಸರಣ ಮತ್ತು ಸಂವಹನಕ್ಕೆ ಅನನ್ಯ ಕೊಡುಗೆಯನ್ನು ನೀಡಿರುವ ಸಂವಹನಕಾರರನ್ನು ಗುರುತಿಸಿ ಸನ್ಮಾನ ಮತ್ತು ಪ್ರಶಸ್ತಿ ನೀಡಲಾಗುವುದು.
- **ವಿಜ್ಞಾನ, ತಂತ್ರಜ್ಞಾನ, ಕೃಷಿ ಮತ್ತು ವೈದ್ಯಕೀಯ ವಿಷಯಗಳ ಕನ್ನಡ ಪುಸ್ತಕಗಳಿಗೆ ಪ್ರಶಸ್ತಿ** : ಕನ್ನಡದಲ್ಲಿ ಹೆಚ್ಚು ಹೆಚ್ಚು ವಿಜ್ಞಾನ ಪುಸ್ತಕಗಳ ಪ್ರಕಟಣೆಗೆ ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಪ್ರತಿ 2 ವರ್ಷಗಳಿಗೊಮ್ಮೆ ಅಕಾಡೆಮಿಯು ಆಯ್ದ ಅತ್ಯುತ್ತಮವಾದ ಕನ್ನಡ ಪುಸ್ತಕಗಳಿಗೆ ಪ್ರಶಸ್ತಿಯನ್ನು ನೀಡುತ್ತಿದೆ. ಈ ಪ್ರಶಸ್ತಿಗೆ 2019ರ ಜನವರಿ ಮಾಹೆಯಿಂದ 2020ರ ಡಿಸೆಂಬರ್ ಮಾಹೆಯಲ್ಲಿ ಪ್ರಕಟಗೊಂಡ ಪುಸ್ತಕಗಳು ಅರ್ಹವಾಗಿರುತ್ತವೆ.
- **ಯುವ ವಿಜ್ಞಾನಿಗಳಿಗೆ ಪ್ರತಿಭಾ ಪುರಸ್ಕಾರ**

**ವಿಜ್ಞಾನ ಲೋಕ ದ್ವೈಮಾಸಿಕ ಸಂಚಿಕೆ: :** ಒಟ್ಟು 6 ಸಂಚಿಕೆಗಳನ್ನು 2020ರ ಮೇ, ಜುಲೈ, ಸೆಪ್ಟೆಂಬರ್, ನವೆಂಬರ್ ಮತ್ತು 2021ರ ಜನವರಿ ಮತ್ತು ಮಾರ್ಚ್ ಮಾಹೆಗಳಲ್ಲಿ ಹೊರತಂದು, ಪದವಿ ಕಾಲೇಜುಗಳು, ಗ್ರಂಥಾಲಯಗಳು ಮತ್ತು ಇತರೆ ವಿಜ್ಞಾನ ಸಂಸ್ಥೆಗಳಿಗೆ ಉಚಿತವಾಗಿ ಕಳುಹಿಸಿಕೊಡಲಾಗುವುದು.

*ಜನಸಾಮಾನ್ಯರ ಆವಿಷ್ಕಾರಗಳನ್ನು ಗುರುತಿಸಿ ಪ್ರೋತ್ಸಾಹಿಸಲು ಆವಿಷ್ಕಾರ ವೇದಿಕೆ*

*ವಿಜ್ಞಾನ ಮತ್ತು ತಂತ್ರಜ್ಞಾನದ ಮುಂಚೂಣಿ ವಿಷಯಗಳಲ್ಲಿ ಜ್ಞಾನ ಭಂಡಾರ ಸೃಜನೆ ಮತ್ತು ವಿತರಣೆ*

**ವಿಜ್ಞಾನ ವಿಶೇಷ ಉಪನ್ಯಾಸ ಮಾಲೆ/ ವಿಶೇಷ ಕಾರ್ಯಾಗಾರ:** ಸ್ನಾತಕೋತ್ತರ ಪದವಿ ವಿದ್ಯಾರ್ಥಿಗಳಿಗೆ 03 ದಿನಗಳ 06 ವಿಶೇಷ ಉಪನ್ಯಾಸ ಮಾಲೆ ಮತ್ತು 02 ದಿನಗಳ 05 ವಿಶೇಷ ಕಾರ್ಯಾಗಾರಗಳನ್ನು 2019–'20ನೇ ಸಾಲಿನಲ್ಲಿ ನಡೆಸಲಾಗುವುದು.

**ವಿಜ್ಞಾನ ಸಂವಹನ, ಸಂವಾದ ಮತ್ತು ವಿಜ್ಞಾನವನ್ನು ಜನಪ್ರಿಯಗೊಳಿಸುವುದು:** ಅಕಾಡೆಮಿಯ ವತಿಯಿಂದ ವಿಜ್ಞಾನ ಸಂವಹನ ಕಾರ್ಯಾಗಾರಗಳು, ವಿಜ್ಞಾನ ಲೇಖಕರು ಮತ್ತು ಪತ್ರಕರ್ತರೊಂದಿಗೆ ಸಂವಾದ, ಮಾಧ್ಯಮದೊಂದಿಗೆ ಸಂವಹನ ಮತ್ತು ಕನ್ನಡದಲ್ಲಿ ವಿಜ್ಞಾನವನ್ನು ಜನಪ್ರಿಯಗೊಳಿಸುವ ಕಾರ್ಯಕ್ರಮಗಳನ್ನು ಆಯೋಜಿಸಲಾಗುವುದು.

**ವಿಜ್ಞಾನ ಮತ್ತು ಇಂಜಿನಿಯರಿಂಗ್ ವಿಷಯಗಳಲ್ಲಿ ಸರ್ಟಿಫಿಕೇಟ್ ಕೋರ್ಸ್‌ಗಳು:** 2020–21ನೇ ಸಾಲಿನಲ್ಲಿ 06 ಕಾರ್ಯಕ್ರಮಗಳನ್ನು ನಡೆಸಲಾಗುವುದು.

**ವಿಭಾಗ ಮತ್ತು ರಾಜ್ಯ ಮಟ್ಟದ ನಾಟಕ, ಗಣಿತ, ಚಿತ್ರಕಲೆ/ಪೈಂಟಿಂಗ್ ಹಾಗೂ ಪ್ರಬಂಧ ಸ್ಪರ್ಧೆ ಆಯೋಜನೆ:** ರಾಜ್ಯದ 6 ಶೈಕ್ಷಣಿಕ ವಿಭಾಗಗಳಲ್ಲಿ ವಿಭಾಗ ಮಟ್ಟದ ಸ್ಪರ್ಧೆಗಳನ್ನು 2020ರ ಡಿಸೆಂಬರ್ ಮಾಹೆಯಲ್ಲಿ ನಡೆಸಿ, ರಾಜ್ಯ ಮಟ್ಟದ ಸ್ಪರ್ಧೆಯನ್ನು ಬೆಂಗಳೂರಿನಲ್ಲಿ 2021ರ ಜನವರಿ/ಫೆಬ್ರವರಿ ಮಾಹೆಯಲ್ಲಿ ಆಯೋಜಿಸಲಾಗುವುದು

**ಡಿಜಿಟಲ್ ಮಾಹಿತಿ ಅಭಿವೃದ್ಧಿ, ವಿಜ್ಞಾನ ಕಿರು ಚಿತ್ರಗಳು/ ಸಾಕ್ಷ್ಯ ಚಿತ್ರಗಳ ತಯಾರಿಕೆ:** ವಿಜ್ಞಾನ ಮತ್ತು ತಂತ್ರಜ್ಞಾನ ಮುಂಚೂಣಿ ವಿಷಯಗಳಲ್ಲಿ ಡಿಜಿಟಲ್ ಮಾಹಿತಿ ಅಭಿವೃದ್ಧಿ ಹಾಗೂ ಅಕಾಡೆಮಿಯು ನಡೆಸಲಿರುವ ಸರ್ಟಿಫಿಕೇಟ್ ಕೋರ್ಸ್‌ಗಳಿಗೆ ಬೇಕಾಗುವ ಜ್ಞಾನ ಭಂಡಾರಗಳನ್ನು ಅಭಿವೃದ್ಧಿಡಿಸಲಾಗುವುದು. ತಜ್ಞ ಉಪನ್ಯಾಸಗಳು, ಕಿರು ಚಿತ್ರಗಳು ಹಾಗೂ ಸಾಕ್ಷ ಚಿತ್ರಗಳನ್ನು ಅಕಾಡೆಮಿಯಲ್ಲಿಯೇ ತಯಾರಿಸಲಾಗುವುದು. ರಾಜ್ಯದ ಹಿಂದುಳಿದ ಪ್ರದೇಶಗಳ ವಿವಿಧ ಶೈಕ್ಷಣಿಕ ಸಂಸ್ಥೆಗಳಿಗೆ ಡಿ.ವಿ.ಡಿ/ಸಿ.ಡಿ ಮೂಲಕ ವಿತರಿಸಲಾಗುವುದು.

**ಆವಿಷ್ಕಾರ ವೇದಿಕೆ ಹಾಗೂ ವಿಜ್ಞಾನ & ತಂತ್ರಜ್ಞಾನದಲ್ಲಿ ಸ್ಥಳೀಯ ಆವಿಷ್ಕಾರಗಳ ಪ್ರೋತ್ಸಾಹಕ್ಕೆ ಆವಿಷ್ಕಾರ ವೇದಿಕೆ ಮತ್ತು ಉದ್ಯಮಶೀಲತೆ ಬೆಳವಣಿಗೆಗೆ ಉತ್ತೇಜನ:** ರಾಜ್ಯದಲ್ಲಿ ಅದರಲ್ಲೂ ಪ್ರಮುಖವಾಗಿ ಗ್ರಾಮೀಣ ಭಾಗದ ಜನರ ವಿನೂತನ ಆವಿಷ್ಕಾರಗಳನ್ನು ಗುರಿತಿಸಿ, ಮುಖ್ಯವಾಹಿನಿಗೆ ತರುವುದು ಈ ಕಾರ್ಯಕ್ರಮದ ಉದ್ದೇಶವಾಗಿದೆ.

**ಇತರೆ ಕಾರ್ಯಕ್ರಮಗಳು:**

- ವಿಜ್ಞಾನ ಮತ್ತು ತಂತ್ರಜ್ಞಾನಕ್ಕೆ ಸಂಬಂಧಿಸಿದ ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ದಿನಾಚರಣೆ
- ಪ್ರೌಢಶಾಲಾ ವಿದ್ಯಾರ್ಥಿಗಳಿಗೆ ಸ್ಪಿಂಗ್ 2021 ಮತ್ತು ಸೈ–ಕ್ಯಾಸ್ಕೇಡ್ 03: ವಿಜ್ಞಾನ ಮಾಡಲ್ ಪ್ರದರ್ಶನ ಸ್ಪರ್ಧೆ
- ಸ್ಮಾಲ್ ಗ್ರಾಂಟ್ಸ್: ವಿಜ್ಞಾನ ಪ್ರೋತ್ಸಾಹಕ ಕಾರ್ಯಕ್ರಮಗಳನ್ನು ರಾಜ್ಯಾದ್ಯಂತ ಶೈಕ್ಷಣಿಕ ಸಂಸ್ಥೆಗಳು, ವಿಶ್ವವಿದ್ಯಾನಿಲಯಗಳು ಹಾಗೂ ಇತರೆ ಸಂಘ ಸಂಸ್ಥೆಗಳಿಗೆ ಅಲ್ಪ ಮೊತ್ತದ ಅನುದಾನ ನೀಡಿ ಪ್ರೋತ್ಸಾಹಿಸಲಾಗುವುದು.
- ಸದಸ್ಯತ್ವ, ಫೆಲೋಷಿಪ್ ಮತ್ತು ಎಮೆರಿಟಸ್ ಸ್ಥಾನಗಳನ್ನು ಕಲ್ಪಿಸಲಾಗುವುದು.
- ಕಾರ್ಪೊರೇಟ್ ಸಂಶೋಧನೆ ಮತ್ತು ಅಭಿವೃದ್ಧಿ ಸಂಸ್ಥೆಗಳೊಡನೆ ಸಂಯೋಜನೆ
- ಕೋವಿಡ್ 19 ನಂತರದ ಪುನರ್ ನಿರ್ಮಾಣ ಗೋಷ್ಠಿಗಳು ಮತ್ತು ಪ್ರಕಟಣೆ
- ಅಕಾಡೆಮಿ ಕಾರ್ಯಕ್ರಮಗಳ ಮೌಲ್ಯಮಾಪನ

## ಅಕಾಡೆಮಿಯು ಆರ್ಥಿಕ ವರ್ಷ 2020–'21ರ ಮೊದಲ ತ್ರೈಮಾಸಿಕದಲ್ಲ (ಏಪ್ರಿಲ್–ಜೂನ್) ನಡೆಸಿದ ಕಾರ್ಯಕ್ರಮಗಳು

| ಕ್ರ. ಸಂ. | ದಿನಾಂಕ | ಕಾರ್ಯಕ್ರಮ | ಫಲಾನುಭವಿಗಳ ಸಂಖ್ಯೆ |
|---|---|---|---|
| 1 | ಮೇ 19, 2020 | ಕೊವಿಡ್19 ದಿನಗಳಲ್ಲಿ ಉತ್ತಮ ಸೈಬರ್ ಭದ್ರತಾ ಅಭ್ಯಾಸಗಳು : ರಾಷ್ಟ್ರೀಯ ವೆಬಿನಾರ್ | 772 |
| 2 | ಮೇ 27, 2020 | ಕರೋನಾ ವೈರಸ್ ಕೋವಿಡ್ 19 – ಒಂದು ಸಮಗ್ರ ಅವಲೋಕನ ಮತ್ತು ಇತ್ತೀಚಿನ ಮಾಹಿತಿಗಳು | 298 |
| 3 | ಮೇ 28, 2020 | ಆಧುನೀಕರಣ ಮತ್ತು ಭಾರತೀಯ ಸಂಪ್ರದಾಯದ ಮಿಶ್ರಣದೊಂದಿಗೆ ಪರಿಸರದ ಅಭಿವೃದ್ಧಿ ಮತ್ತು ಸಂರಕ್ಷಣೆಯ ಸಮಗ್ರ ವಿಧಾನ : ಕೋವಿಡ್ 19 | 375 |
| 4 | ಮೇ 29, 2020 | ಪ್ರಸರಣ, ವೈರಾಲಜಿ ಮತ್ತು ಸಾಂಕ್ರಾಮಿಕ ರೋಗಶಾಸ್ತ್ರದ ಇತ್ತೀಚಿನ ಬೆಳವಣಿಗೆಗಳು: ಕೋವಿಡ್ 19 | 243 |
| 5 | ಜೂನ್ 2–3, 2020 | ನಾವೀನ್ಯತೆ ಮತ್ತು ಬೌದ್ಧಿಕ ಆಸ್ತಿ ಕಾರ್ಯತಂತ್ರ ಕುರಿತು 2 ದಿನಗಳ ವೆಬ್ ಸೆಮಿನಾರ್ | 139 |
| 6 | ಜೂನ್ 12, 2020 | ಸೈಬರ್ ಭದ್ರತೆ | 117 |
| 7 | ಜೂನ್ 17–20, 2020 | ಸಂಶೋಧನಾ ವಿಧಾನ ಮತ್ತು ದತ್ತಾಂಶ ವಿಶ್ಲೇಷಣೆ | 400 |

*ಅಕಾಡೆಮಿ ಕಾರ್ಯಕ್ರಮಗಳ ಬಗ್ಗೆ ಹೆಚ್ಚಿನ ಮಾಹಿತಿಗಾಗಿ ನಮ್ಮ ವೆಬ್ ಸೈಟ್ kstacademy.in ವೀಕ್ಷಿಸಿ*

*ಯೋಜನಾ ಇಲಾಖೆ ಮತ್ತು ಅಕಾಡೆಮಿಯ ವತಿಯಿಂದ ವೆಬಿನಾರ್*

*ಕೋವಿಡ್19 ನಂತರದ ಕಾರ್ಯತಂತ್ರಗಳ ಬಗ್ಗೆ ಚರ್ಚೆ*

## ಕೋವಿಡ್19 ನಂತರದ ಕಾರ್ಯತಂತ್ರ: ಜೂನ್ 19, 2020; ಬೆಳಗ್ಗೆ 11:00 ರಿಂದ ಮದ್ಯಾಹ್ನ 03:30 ರವರೆಗೆ

ಅಕಾಡೆಮಿಯ ಮಾನ್ಯ ಅಧ್ಯಕ್ಷರಾದ ಪ್ರೊ. ಎಸ್. ಅಯ್ಯಪ್ಪನ್ ರವರು ಪ್ರಾಸ್ತಾವಿಕ ನುಡಿಯೊಂದಿಗೆ ಸಭೆಯಲ್ಲಿ ಭಾಗವಹಿಸಿದ್ದ ಪ್ರತಿನಿಧಿಗಳನ್ನು ಸ್ವಾಗತಿಸಿದರು. ಕರ್ನಾಟಕ ಸರ್ಕಾರದ ಯೋಜನಾ ಮಂಡಳಿಯ ಉಪಾಧ್ಯಕ್ಷರಾದ ಶ್ರೀ ಬಿ.ಜೆ.ಪುಟ್ಟಸ್ವಾಮಿರವರು ಕಾರ್ಯಕ್ರಮವನ್ನು ಉದ್ಘಾಟಿಸಿ, ತಮ್ಮ ಭಾಷಣದಲ್ಲಿ ಶ್ರೀಯುತರು, ಕೋವಿಡ್19 ನಂತರದ ಸನ್ನಿವೇಶಗಳನ್ನು ನಿಭಾಯಿಸಲು ಮತ್ತು ಜೀವ ಮತ್ತು ಬದುಕು ಎರಡನ್ನೂ ರಕ್ಷಿಸಲು ಹಾಕಿಕೊಳ್ಳಬೇಕಾದ ಕ್ರಮಗಳ ಅಗತ್ಯತೆಯನ್ನು ಸಭೆಗೆ ಮನವರಿಕೆ ಮಾಡಿಕೊಟ್ಟರು.

ಕರ್ನಾಟಕ ಸರ್ಕಾರದ ಯೋಜನೆ, ಕಾರ್ಯಕ್ರಮ ಸಂಯೋಜನೆ, ಅಂಕಿ ಅಂಶ ಇಲಾಖೆಯ ಅಪರ ಮುಖ್ಯ ಕಾರ್ಯದರ್ಶಿಗಳಾದ ಡಾ (ಶ್ರೀಮತಿ) ಶಾಲಿನಿ ರಜನೀಶ್ ರವರು ಮಾತನಾಡಿ, ಕೋವಿಟ್19 ಪಿಡುಗನ್ನು ಹತ್ತಿಕ್ಕಲು ವಿಜ್ಞಾನ ಮತ್ತು ತಂತ್ರಜ್ಞಾನ ಬಳಕೆಯ ಮಹತ್ವವನ್ನು ತಿಳಿಸುತ್ತಾ, ಭಾರತದ ಗೌರವಾನ್ವಿತ ಪ್ರಧಾನಿ ಮಂತ್ರಿಗಳು ಘೋಷಿಸಿರುವ 'ಆತ್ಮನಿರ್ಭರ ಭಾರತ' ಯೋಜನೆಯನ್ನು ಬಳಸಿಕೊಳ್ಳುವ ಅಗತ್ಯತೆಯನ್ನು ಅವರು ಒತ್ತಿ ಹೇಳಿದರು. ಅಲ್ಲದೆ, ಆರೋಗ್ಯ ಮತ್ತು ಆರ್ಥಿಕತೆಯ ತ್ವರಿತ ಚೇತರಿಕೆಗೆ ಸಾರ್ವಜನಿಕ ಖಾಸಗಿ ಸಹಭಾಗಿತ್ವ ಮತ್ತು ಜಾಗತಿಕ ಸಹಭಾಗಿತ್ವದ ಮೂಲಕ ನಾವೀನ್ಯ ಪರಿಹಾರಗಳನ್ನು ಕಂಡುಕೊಳ್ಳಬೇಕೆಂದು ಕರೆ ನೀಡಿದರು.

ಡಾ. ಇ. ವಿ. ರಮಣ ರೆಡ್ಡಿ, ಅಪರ ಮುಖ್ಯ ಕಾರ್ಯದರ್ಶಿಗಳು, ಎಲೆಕ್ಟ್ರಾನಿಕ್ಸ್, ಐಟಿ, ಬಿಟಿ ಮತ್ತು ಎಸ್ & ಟಿ ಹಾಗೂ ಉನ್ನತ ಶಿಕ್ಷಣ ಇಲಾಖೆ ಇವರು ಸಭೆಯನ್ನು ಉದ್ದೇಶಿಸಿ ಮಾತನಾಡಿ, ರಾಜ್ಯದಲ್ಲಿ ಈ ಪಿಡುಗಿನ ಪರಿಣಾಮಕಾರಿ ನಿರ್ವಹಣೆಗಾಗಿ ತಂತ್ರಜ್ಞಾನವನ್ನು ಸಮರ್ಥವಾಗಿ ಬಳಸಿಕೊಳ್ಳಲಾಗುತ್ತಿದೆ ಎಂದು ತಿಳಿಸಿದರು. ಇಂತಹ ತುರ್ತು ಸಂದರ್ಭದಲ್ಲಿ ಈ ಸಭೆಯನ್ನು ಆಯೋಜಿಸುವಲ್ಲಿ ಯೋಜನಾ ಇಲಾಖೆ ಮತ್ತು ಅಕಾಡೆಮಿಯ ಮುಂದಾಳತ್ವನ್ನು ಶ್ಲಾಘಿಸಿದರು.

ಸಭೆಯಲ್ಲಿ ಮೂರು ಆಹ್ವಾನಿತ ಪ್ರಸ್ತುತಿಗಳನ್ನು ಮಂಡಿಸಲಾಯಿತು. ತಜ್ಞರಾದ ಡಾ. ಸಿ. ಎನ್. ಮಂಜುನಾಥ್, ನಿರ್ದೇಶಕರು, ಶ್ರೀ ಜಯದೇವ ಇನ್ಸ್ಟಿಟ್ಯೂಟ್ ಆಫ್ ಕಾರ್ಡಿಯೋವಾಸ್ಕುಲರ್ ಸೈನ್ಸಸ್ & ರಿಸರ್ಚ್, ಬೆಂಗಳೂರು; ಡಾ.ಆಕಾಶ್ ಪ್ರಭುನೆ, ಸಲಹೆಗಾರ (ಆರೋಗ್ಯ), ಸೆಂಟರ್ ಫಾರ್ ಪಬ್ಲಿಕ್ ಅಫೇರ್ಸ್, ಬೆಂಗಳೂರು; ಡಾ.ಅಲೋಕ್ ಕುಮಾರ್, ಐಐಎಸ್ಸಿ; ಡಾ.ಸಂತೋಷ್ ಅನ್ಸುಮಾಲಿ, ಜೆಎನ್‌ಸಿಎಎಸ್‌ಆರ್, ಡಾ.ಮೆಹರ್ ಪ್ರಕಾಶ್, ಜೆಎನ್‌ಸಿಎಎಸ್‌ಆರ್; ಬೆಂಗಳೂರು ಮತ್ತು ಡಾ. ಛಾಯಾ ಕೆ. ದೇಗಾಂವ್ಕರ್, ಅಪರ ಮುಖ್ಯ ಮೌಲ್ಯಮಾಪನಾಧಿಕಾರಿ, ಕೆಇಎ, ಪಿಪಿಎಂಎಸ್‌ಡಿ, ಕರ್ನಾಟಕ ಸರ್ಕಾರ ಇವರು ಪ್ರಸ್ತುತಿಯನ್ನು ಮಂಡಿಸಿದರು.

ಸಭೆಯಲ್ಲಿ, ಆರೋಗ್ಯ; ಉದ್ಯಮ, ಸಂಸ್ಥೆ ಮತ್ತು ನೀತಿ; ಕೃಷಿ ಮತ್ತು ಪಶುವೈದ್ಯಕೀಯ ವಿಜ್ಞಾನ; ವಿಪತ್ತು ನಿರ್ವಹಣೆ; ವಿಜ್ಞಾನ ಮತ್ತು ತಂತ್ರಜ್ಞಾನ; ಬ್ಯಾಂಕಿಂಗ್; ಪ್ರವಾಸೋದ್ಯಮ ಮತ್ತು ಸಂಬಂಧಿತ ಕ್ಷೇತ್ರಗಳಲ್ಲಿನ 50 ಕ್ಕೂ ಹೆಚ್ಚು ಆಹ್ವಾನಿತ ಪ್ರತಿನಿಧಿಗಳು ಭಾಗವಹಿಸಿದ್ದರು. ಅಕಾಡೆಮಿಯ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳಾದ ಡಾ.ಎ.ಎಂ.ರಮೇಶ್ ರವರು ವಂದನಾರ್ಪಣೆ ಸಲ್ಲಿಸಿದರು.

## ನಿಮಗಿದು ಗೊತ್ತೇ ?

### ದ್ರಾಕ್ಷಿ ಮೈಕ್ರೋವೇವ್‌ನಲ್ಲಿಟ್ಟಾಗ ಹಣತೆಯಂತೆ ಬೆಳಕು ಚೆಲ್ಲುತ್ತದೆ

**- ಡಾ ಆನಂದ್ ಆರ್, ಹಿರಿಯ ವೈಜ್ಞಾನಿಕ ಅಧಿಕಾರಿ**



ಚಿತ್ರ : pnas.org/content/116/10/4000

ದ್ರಾಕ್ಷಿಯನ್ನು ಮೈಕ್ರೊವೇವ್ ಓವನ್‌ನಲ್ಲಿ ಇರಿಸಿದಾಗ ಹಣತೆಯಂತೆ ಬೆಳಗುತ್ತದೆ ಎಂದು ತೋರಿಸುವ ಸಿಡ್ನಿ ವಿಶ್ವವಿದ್ಯಾನಿಲಯದ ಭೌತವಿಜ್ಞಾನಿ 2011 ರಲ್ಲಿ ಹರಿಬಿಟ್ಟ ಯೂಟ್ಯೂಬ್ ವೈರಲ್ ವೀಡಿಯೋದ ವೈಜ್ಞಾನಿಕ ತಳಹದಿಯನ್ನು ಎರಡು ದಶಕಗಳ ನಂತರ ಯಶಸ್ವಿಯಾಗಿ ಉತ್ತರಿಸಲಾಗಿದೆ. ಮಾರ್ಚ್ 05, 2019 ರಲ್ಲಿ ಪ್ರೊಸೀಡಿಂಗ್ಸ್ ಆಫ್ ದಿ ನ್ಯಾಷನಲ್ ಅಕಾಡೆಮಿ ಆಫ್ ಸೈನ್ಸಸ್‌ನಲ್ಲಿ ಪ್ರಕಟವಾದ ಅಧ್ಯಯನವು, ದ್ರಾಕ್ಷಿ ಬಿಸಿಯಾದಾಗ ಸಡಿಲವಾದ ಎಲೆಕ್ಟ್ರಾನ್‌ಗಳು ಮತ್ತು ಅಯಾನುಗಳು ಕ್ಲಸ್ಟರ್ ಗಳಾಗಿ ಪ್ಲಾಸ್ಮಾವನ್ನು ರೂಪಿಸುತ್ತವೆ. ಇದರ ಪರಿಣಾಮವಾಗಿ ದ್ರಾಕ್ಷಿ ಬೆಂಕಿಯ ಉಂಡೆಯಂತೆ ಬೆಳಗುತ್ತದೆ ಎಂದು ವರದಿ ಮಾಡಿದೆ. ಹೆಚ್ಚಿನ ಮಾಹಿತಿಯನ್ನು https://doi.org/10.1073/pnas.1818350116 ನಿಂದ ಪಡೆಯಬಹುದಾಗಿದೆ.

**ಸೂಚನೆ: ಹಿರಿಯರ ಮಾರ್ಗದರ್ಶನದಲ್ಲಿ ಮಾತ್ರ ಪ್ರಯತ್ನಿಸುವುದು**

### ಹಿಂದಕ್ಕೆ ಹಾರಬಲ್ಲ ಏಕೈಕ ಪಕ್ಷಿ

ಚಿತ್ರ : www.discovermagazine.com

ಹಮ್ಮಿಂಗ್ ಬರ್ಡ್ಸ್ ಹಿಂದಕ್ಕೆ ಹಾರಬಲ್ಲ ಏಕೈಕ ಹಕ್ಕಿ. ಸುಮಾರು 5 ಇಂಚು ಉದ್ದ ಮತ್ತು 31.75 ಗ್ರಾಂಗಿಂತ ಕಡಿಮೆ ತೂಕವಿರುವ ಈ ಸಣ್ಣ ಪಕ್ಷಿ ಅಮೆರಿಕಕ್ಕೆ ಸ್ಥಳೀಯವಾಗಿದ್ದು, ದೇಹದ ತೂಕದ ಸುಮಾರು ಮೂರನೇ ಒಂದು ಭಾಗವು ಹಾರುವಾಗ ಬಳಸುವ ಸ್ನಾಯುಗಳದ್ದಾಗಿದೆ. ಇವುಗಳ ರೆಕ್ಕೆ ಮಾದರಿಯು ವಿಭಿನ್ನವಾಗಿದ್ದು, ತನ್ನ ರೆಕ್ಕೆಗಳನ್ನು 180 ಡಿಗ್ರಿಗಳ ಮಟ್ಟಿಗೆ ಎಲ್ಲಾ ದಿಕ್ಕುಗಳಲ್ಲಿಯೂ ತಿರುಗಿಸಬಲ್ಲದು. ಇದಕ್ಕೆ ಕಾರಣ ಭುಜದಲ್ಲಿರುವ ವಿಶಿಷ್ಟವಾದ ಗುಂಡು ಮತ್ತು ಗುಳಿ ವ್ಯವಸ್ಥೆ. ಭುಜ ಮತ್ತು ಮೊಣಕೈ ಕೀಲುಗಳು ಅವುಗಳ ಸಣ್ಣ ದೇಹಗಳಿಗೆ ಬಹಳ ಹತ್ತಿರದಲ್ಲಿದ್ದು, ರೆಕ್ಕೆಗಳನ್ನು ಓರೆಯಾಗಿಸಲು ಮತ್ತು ತಿರುಗಿಸಲು ಅನುವು ಮಾಡಿಕೊಡುತ್ತವೆ. ಸೆಕೆಂಡಿಗೆ ಸುಮಾರು 80 ಬಾರಿ ರೆಕ್ಕೆಗಳನ್ನು ಬೀಸಬಲ್ಲ ಈ ಪಕ್ಷಿ ಸೆಕೆಂಡಿಗೆ 15 – 22 ಮೈಲಿ ವೇಗದಲ್ಲಿ ಹಾರಬಲ್ಲವು.

ಮಾಹಿತಿ ಸಂಗ್ರಹ: https://www.discovermagazine.com/ ಮತ್ತು https://www.worldatlas.com/

### ಪಾರದರ್ಶಕ ಗ್ರ್ಯಾಫೀನ್ ವಿದ್ಯುದ್ವಾರಗಳಿಂದ ಹೊಸ ಪೀಳಿಗೆಯ ಹಗುರವಾದ, ಬಾಗುವ ಸೌರ ಕೋಶಗಳು ಮತ್ತು ಪರದೆಗಳು




ಚಿತ್ರ : http://news.mit.edu/

ಶುದ್ಧ ಇಂಗಾಲದ ಒಂದು ರೂಪವಾದ ಗ್ರ್ಯಾಫೀನ್, ಷಡ್ಭುಜೀಯ ಶ್ರೇಣಿಯಲ್ಲಿ ಸಮತಟ್ಟಾದ ಪರಮಾಣು ಜೋಡಣಾ ವ್ಯವಸ್ಥೆಯನ್ನು ಹೊಂದಿದೆ. ಉತ್ಕೃಷ್ಟ ವಿದ್ಯುತ್ ಮತ್ತು ಯಾಂತ್ರಿಕ ಗುಣಲಕ್ಷಣಗಳನ್ನು ಹೊಂದಿರುವ ಗ್ರ್ಯಾಫೀನ್, ಹೇರಳವಾದ ಅಗ್ಗದ ವಸ್ತುಗಳಿಂದ ತಯಾರಿಸಲ್ಪಟ್ಟಿದ್ದು, ಅತ್ಯಂತ ತೆಳ್ಳಗಿರುತ್ತದೆ ಮತ್ತು ಬಾಗುವ ಲಕ್ಷಣಗಳನ್ನು ಹೊಂದಿದೆ. ಇದಲ್ಲದೆ, ತಾಮ್ರವನ್ನು ಸೀಡ್ ಪದರವಾಗಿ ಬಳಸಿಕೊಂಡು ರಾಸಾಯನಿಕ ಆವಿ ಶೇಖರಣೆ (ಸಿವಿಡಿ) ಮೂಲಕ ದೊಡ್ಡ ಹಾಳೆಗಳ ರೂಪದಲ್ಲಿ ಇದನ್ನು ಸುಲಭವಾಗಿ ವೃದ್ಧಿಸಬಹುದಾಗಿದೆ. ಉತ್ತಮ–ಗುಣಮಟ್ಟದ, ತೆಳುವಾದ ಗ್ರ್ಯಾಫೀನ್‌ನ ದೊಡ್ಡ ಹಾಳೆಗಳನ್ನು ತಯಾರಿಸುವ ಈ ಹೊಸ ವಿಧಾನದಿಂದಾಗಿ ಅತ್ಯಂತ ಹಗುರವಾದ, ಬಾಗುವ ಸೌರ ಕೋಶಗಳು ಮತ್ತು ಹೊಸ ವರ್ಗದ ಬೆಳಕು–ಹೊರಸೂಸುವ ಸಾಧನಗಳು ಮತ್ತು ಇತರ ತೆಳು–ಫಿಲ್ಮ್ ಎಲೆಕ್ಟ್ರಾನಿಕ್ಸ್‌ಗಳ ತಯಾರಿಕೆಗೆ ನಾಂದಿಯಾಗಲಿದೆ. ಅಮೇರಿಕಾದ ಎಂಐಟಿನಲ್ಲಿ ಅಭಿವೃದ್ಧಿಪಡಿಸಲ್ಪಟ್ಟ ಈ ಹೊಸ ಉತ್ಪಾದನಾ ಪ್ರಕ್ರಿಯೆಯು ಕೈಗಾರಿಕಾ ಉತ್ಪಾದನೆಯ ಕ್ಷಮತೆಯನ್ನು ಹೊಂದಿದೆ.

# ಸಮರ್ಥ ವಿಜ್ಞಾನಿ ಮತ್ತು ದಕ್ಷ ಆಡಳಿತಗಾರ ಡಾ. ಹೆಚ್. ಹೊನ್ನೇಗೌಡ ಅವರಿಗೆ ಧನ್ಯವಾದಗಳು

– ಡಾ. ಎ. ಎಂ. ರಮೇಶ್
ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ,
ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

ಡಾ. ಹೆಚ್. ಹೊನ್ನೇಗೌಡ

ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಿಶೇಷ ಕಾರ್ಯದರ್ಶಿಗಳು, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿಯ ವ್ಯವಸ್ಥಾಪಕ ನಿರ್ದೇಶಕರು ಹಾಗೂ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಪದನಿಮಿತ್ತ ಸದಸ್ಯ ಕಾರ್ಯದರ್ಶಿಗಳಾಗಿದ್ದ ಡಾ. ಹೆಚ್. ಹೊನ್ನೇಗೌಡ ಅವರು 2020ರ ಮೇ 31 ರಂದು ಸೇವಾ ನಿವೃತ್ತರಾದರು. ಶ್ರೀಯುತರು ಸರ್ಕಾರದಲ್ಲಿ 31 ವರ್ಷಗಳ ಸಾರ್ಥಕ ಸೇವೆಯನ್ನು ಸಲ್ಲಿಸಿದ್ದು, ಅದರಲ್ಲಿ 10 ವರ್ಷಗಳನ್ನು ಭಾರತ ಸರ್ಕಾರದ ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯಲ್ಲಿ (ಇಸ್ರೋ) ವಿಜ್ಞಾನಿಯಾಗಿ (ವಿಜ್ಞಾನಿ S D ಯಿಂದ S F) ಹಾಗೂ 20 ವರ್ಷಗಳನ್ನು ರಾಜ್ಯ ಸರ್ಕಾರದಲ್ಲಿ ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದ ನಿರ್ದೇಶಕರಾಗಿ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆಯ ವಿಶೇಷ ತಾಂತ್ರಿಕ ನಿರ್ದೇಶಕರಾಗಿ ಮತ್ತು ವಿಶೇಷ ತಾಂತ್ರಿಕ ಕಾರ್ಯದರ್ಶಿಗಳಾಗಿ ಸಮರ್ಪಕವಾಗಿ ಕಾರ್ಯನಿರ್ವಹಿಸಿದ್ದಾರೆ. ಗ್ರಾಮೀಣ ಭಾಗದಿಂದ ಬಂದು ಸರ್ಕಾರದಲ್ಲಿ ಉನ್ನತ ಹುದ್ದೆಗಳನ್ನು ಅಲಂಕರಿಸಿ, ಸಮರ್ಥ ವಿಜ್ಞಾನಿ, ದಕ್ಷ ಆಡಳಿತಗಾರ, ಸಹೃದಯಿ ಮತ್ತು ಸ್ನೇಹಪರ ವ್ಯಕ್ತಿತ್ವದವರೆಂಬ ಹೆಗ್ಗಳಿಕೆ ಪಾತ್ರರಾಗಿದ್ದಾರೆ.

ಕರ್ನಾಟಕ ರಾಜ್ಯ ದೂರ ಸಂವೇದಿ ಅನ್ವಯಿಕ ಕೇಂದ್ರದ ನಿರ್ದೇಶಕರಾಗಿ 2000ರ ಜುಲೈನಲ್ಲಿ ನಿಯೋಜನೆಗೊಂಡ ಡಾ. ಹೊನ್ನೇಗೌಡ ಅವರು 2007ರ ಮಾರ್ಚ್‌ವರೆಗೆ ಆ ಕೇಂದ್ರವನ್ನು ಮುನ್ನಡೆಸಿದರು. ಸದರಿ ಕೇಂದ್ರದಲ್ಲಿದ್ದ ಬಹು ವಿಷಯ ಸಾಮರ್ಥ್ಯ ಮತ್ತು ತಂತ್ರಜ್ಞಾನ ಪರಿಣತಿಯನ್ನು ಬಳಸಿಕೊಂಡು ರಾಜ್ಯದಲ್ಲಿ ಪ್ರಥಮವಾಗಿ ಜಿಯೋಇನ್ಫಾರ್ಮ್ಯಾಟಿಕ್ಸ್ ವಿಷಯದಲ್ಲಿ ಎಂ. ಟೆಕ್. ಕೋರ್ಸ್ ಅನ್ನು ಭಾರತೀಯ ಸರ್ವೇಕ್ಷಣಾ ಸಂಸ್ಥೆ ಮತ್ತು ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯಗಳ ಸಹಯೋಗದೊಂದಿಗೆ ಪ್ರಾರಂಭಿಸಿದರು. ಅವರು ಕೇವಲ ಆರೂವರೆ ವರ್ಷಗಳ ಅವಧಿಯಲ್ಲಿ ಆ ಕೇಂದ್ರವನ್ನು ದೇಶದಲ್ಲೇ ಒಂದು ಅತ್ಯುತ್ತಮವಾದ ದೂರ ಸಂವೇದಿ ಕೇಂದ್ರವನ್ನಾಗಿ ಮಾರ್ಪಡಿಸಿದ ಕೀರ್ತಿ ಅವರಿಗೆ ಸಲ್ಲುತ್ತದೆ.

ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯನ್ನು ಜುಲೈ 2005ರಲ್ಲಿ ಪ್ರಖ್ಯಾತ ಬಾಹ್ಯಾಕಾಶ ವಿಜ್ಞಾನಿ ಮತ್ತು ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯ ನಿವೃತ್ತ ಅಧ್ಯಕ್ಷರಾಗಿದ್ದ ಪದ್ಮವಿಭೂಷಣ ಪ್ರೊ. ಯು. ಆರ್. ರಾವ್ ಅವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿ, ಪದನಿಮಿತ್ತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ 13 ವರ್ಷಗಳು ಮತ್ತು ಸದಸ್ಯ ಕಾರ್ಯದರ್ಶಿಯಾಗಿ 15 ವರ್ಷಗಳ ಕಾಲ ಸಮರ್ಥವಾಗಿ ಕಾರ್ಯನಿರ್ವಹಿಸಿದ್ದಾರೆ.

ಅವರ ಮಾರ್ಗದರ್ಶನ ಮತ್ತು ಪರಿಶ್ರಮದಿಂದ ಅಕಾಡೆಮಿ ಒಂದು ಮಾದರಿ ಸಂಸ್ಥೆಯಾಗಿ ಬೆಳೆದು, ರಾಜ್ಯಾದ್ಯಂತ ವಿಜ್ಞಾನ ಶಿಕ್ಷಣ ಮತ್ತು ಪ್ರೋತ್ಸಾಹಕ ಕಾರ್ಯಕ್ರಮಗಳನ್ನು ಯಶಸ್ವಿಯಾಗಿ ಆಯೋಜಿಸಲಾಗಿದೆ. ಅಕಾಡೆಮಿಗೆ ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಜಿ.ಕೆ.ವಿ.ಕೆ. ಆವರಣದಲ್ಲಿ 2 ಎಕರೆ ಜಾಗದಲ್ಲಿ ಒಂದು ಸುಸಜ್ಜಿತವಾದ ಕಛೇರಿ ಮತ್ತು ತರಬೇತಿ ಕೇಂದ್ರವನ್ನು ನಿರ್ಮಿಸಲಾಗಿದೆ.

ಶ್ರೀಯುತರು ರಾಜ್ಯದಲ್ಲಿ ಹಲವು ವಿಜ್ಞಾನ ಸಂಸ್ಥೆಗಳು ಮತ್ತು ಕೇಂದ್ರಗಳನ್ನು ಕಟ್ಟಿ ಬೆಳೆಸುವಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ಅವುಗಳಲ್ಲಿ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಪ್ರೋತ್ಸಾಹಕ ಸೊಸೈಟಿ (KSTePS) ಧಾರವಾಡ ಮತ್ತು ಮಂಗಳೂರಿನ ಪಿಲಿಕುಳದಲ್ಲಿ 2 ಪ್ರಾದೇಶಿಕ ವಿಜ್ಞಾನ ಕೇಂದ್ರಗಳು ಹಾಗೂ ಬಳ್ಳಾರಿ, ಬೀದರ್, ರಾಯಚೂರು, ಗೌರಿಬಿದನೂರು ಮತ್ತು ಕಾರವಾರಗಳಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲು ಬಹಳ ಶ್ರಮಿಸಿದ್ದಾರೆ. ಇದಲ್ಲದೇ, ರಾಜ್ಯದ ಇನ್ನೂ 17 ಜಿಲ್ಲೆಗಳಲ್ಲಿ ಉಪ ಪ್ರಾದೇಶಿಕ ವಿಜ್ಞಾನ ಕೇಂದ್ರಗಳನ್ನು ಸ್ಥಾಪಿಸಲೂ ಸಹ ಕ್ರಮಕೈಗೊಂಡಿದ್ದಾರೆ. ಪಿಲಿಕುಳದಲ್ಲಿ ಏಷ್ಯಾದಲ್ಲೇ ಮೊದಲ ಅತ್ಯಾಧುನಿಕ 3ಡಿ ತಾರಾಲಯವನ್ನು ಸ್ಥಾಪಿಸುವುದರಲ್ಲಿ ಪ್ರಮುಖ ಪಾತ್ರವನ್ನು ವಹಿಸಿದ್ದಾರೆ. ಗ್ರಾಮಾಂತರ ವಿದ್ಯಾರ್ಥಿಗಳಿಗೆ ಗುಣಾತ್ಮಕ ಶಿಕ್ಷಣವನ್ನು ನೀಡುವ ನಿಟ್ಟಿನಲ್ಲಿ ರಾಜ್ಯದ 6 ಸ್ಥಳಗಳಲ್ಲಿ ಸಂಪನ್ಮೂಲ ಕೇಂದ್ರಗಳನ್ನು ಸ್ಥಾಪಿಸಿದ್ದಾರೆ. ಅಲ್ಲದೇ, ಬೆಂಗಳೂರಿನಲ್ಲಿ ವಿಶ್ವದ ಮೂರನೇ ಹಾಗೂ ಏಷ್ಯಾದ ಮೊದಲನೇ ವಿಜ್ಞಾನ ಗ್ಯಾಲರಿಯನ್ನು ಸ್ಥಾಪಿಸಲಾಗುತ್ತಿದ್ದು, ವಿಜ್ಞಾನ ಗ್ಯಾಲರಿಯನ್ನು ಬೆಂಗಳೂರಿನಲ್ಲಿ ಸ್ಥಾಪಿಸಲು ಶ್ರೀಯುತರು ಮಹತ್ವಪೂರ್ಣ ಕೊಡುಗೆಯನ್ನು ನೀಡಿದ್ದಾರೆ.

ಡಾ ಹೊನ್ನೇಗೌಡ ಅವರಿಗೆ ಜಿಯೋ ಇನ್ಫಾರ್ಮೆಟಿಕ್ಸ್ ಕ್ಷೇತ್ರದಲ್ಲಿ ಸಲ್ಲಿಸಿರುವ ಅಪ್ರತಿಮ ಸೇವೆಯನ್ನು ಗುರುತಿಸಿ, ಹಲವಾರು ಪ್ರಶಸ್ತಿ ಮತ್ತು ಪುರಸ್ಕಾರಗಳನ್ನು ನೀಡಲಾಗಿದ್ದು, ಅವುಗಳಲ್ಲಿ ಬೃಹತ್ ಬೆಂಗಳೂರು ಮಹಾನಗರ ಪಾಲಿಕೆಯು ನೀಡುವ ಪ್ರತಿಷ್ಠಿತ ಕೆಂಪೇಗೌಡ ಪ್ರಶಸ್ತಿ ಮುಖ್ಯವಾದದ್ದಾಗಿದೆ.

ಡಾ ಹೊನ್ನೇಗೌಡ ಅವರು ನಿವೃತ್ತಿಯ ನಂತರವೂ ರಾಜ್ಯದಲ್ಲಿ ವಿಜ್ಞಾನ ಶಿಕ್ಷಣಕ್ಕೆ ಮತ್ತು ಪ್ರಸರಣಕ್ಕೆ ಇನ್ನೂ ಉತ್ತಮ ಕೊಡುಗೆಯನ್ನು ನೀಡಲೆಂದು ಆಶಿಸುತ್ತಾ, ಅವರು ಉತ್ತಮ ಆರೋಗ್ಯದೊಂದಿಗೆ ಕ್ರಿಯಾಶೀಲರಾಗಿ ಹಲವಾರು ವರ್ಷಗಳ ಕಾಲ ಕಾರ್ಯನಿರ್ವಹಿಸಲೆಂದು ಹಾರೈಸುತ್ತೇವೆ.

'ವಿಜ್ಞಾನ ಬೆಳಕು - ತಂತ್ರಜ್ಞಾನ ಬದುಕು'

## ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ

ಪ್ರಮುಖ ಇಲಾಖೆಗಳ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು/ ಪ್ರಧಾನ ಕಾರ್ಯದರ್ಶಿಗಳು ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಕ್ಷೇತ್ರದ ಪರಿಣತರನ್ನೊಳಗೊಂಡ ನಾಮನಿರ್ದೇಶಿತ ಸದಸ್ಯರು ಸೇರಿ ಒಟ್ಟು 15 ಸದಸ್ಯರನ್ನು ಅಕಾಡೆಮಿಯು ಹೊಂದಿದೆ.

**ಪ್ರೊ. ಎಸ್ ಅಯ್ಯಪ್ಪನ್, ಅಧ್ಯಕ್ಷರು**
ಕುಲಾಧಿಪತಿಗಳು, ಕೇಂದ್ರೀಯ ಕೃಷಿ ವಿಶ್ವವಿದ್ಯಾನಿಲಯ, ಇಂಫಾಲ ಮತ್ತು ನಿವೃತ್ತ ಮಹಾ ನಿರ್ದೇಶಕರು, ಭಾರತೀಯ ಕೃಷಿ ಸಂಶೋಧನಾ ಪರಿಷತ್ತು ಹಾಗೂ ನಿವೃತ್ತ ಕಾರ್ಯದರ್ಶಿಗಳು, ಕೃಷಿ ಸಂಶೋಧನೆ ಮತ್ತು ಶಿಕ್ಷಣ ವಿಭಾಗ, ಭಾರತ ಸರ್ಕಾರ

**ಶ್ರೀ ಐ.ಎಸ್.ಎನ್. ಪ್ರಸಾದ್, ಭಾ.ಆ.ಸೇ., ಸದಸ್ಯರು**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ

**ಡಾ. ಇ ವಿ ರಮಣ ರೆಡ್ಡಿ, ಭಾ.ಆ.ಸೇ., ಸದಸ್ಯರು**
ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳು, ವಿದ್ಯುನ್ಮಾನ, ಮಾಹಿತಿ ತಂತ್ರಜ್ಞಾನ, ಜೈವಿಕ ತಂತ್ರಜ್ಞಾನ ಮತ್ತು ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

**ಡಾ. ಇ ವಿ ರಮಣ ರೆಡ್ಡಿ, ಭಾ.ಆ.ಸೇ., ಸದಸ್ಯರು**
ಅಪರ ಮುಖ್ಯ ಕಾರ್ಯದರ್ಶಿಗಳು, ಉನ್ನತ ಶಿಕ್ಷಣ ಇಲಾಖೆ

**ಡಾ. ಹೆಚ್. ಹೊನ್ನೇಗೌಡ, ಸದಸ್ಯ ಕಾರ್ಯದರ್ಶಿಗಳು**
ವಿಶೇಷ ಕಾರ್ಯದರ್ಶಿಗಳು (ತಾಂತ್ರಿಕ), ವಿಜ್ಞಾನ ಮತ್ತು ತಂತ್ರಜ್ಞಾನ ಇಲಾಖೆ

**ಪ್ರೊ. ಹೆಚ್. ಎ. ರಂಗನಾಥ್, ಸದಸ್ಯರು**
ವಿಶ್ರಾಂತ ಕುಲಪತಿಗಳು, ಬೆಂಗಳೂರು ವಿಶ್ವವಿದ್ಯಾನಿಲಯ, ಬೆಂಗಳೂರು

**ಡಾ. ಕೆ. ಬಾಲವೀರ ರೆಡ್ಡಿ, ಸದಸ್ಯರು**
ವಿಶ್ರಾಂತ ಕುಲಪತಿಗಳು, ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ, ಬೆಳಗಾವಿ

**ಪ್ರೊ. ಬಿ. ಜಿ. ಮೂಲಿಮನಿ, ಸದಸ್ಯರು**
ವಿಶ್ರಾಂತ ಕುಲಪತಿಗಳು, ಗುಲ್ಬರ್ಗ ವಿಶ್ವವಿದ್ಯಾನಿಲಯ, ಕಲಬುರಗಿ

**ಪ್ರೊ. ಎ. ಹೆಚ್. ರಾಜಾಸಾಬ್, ಸದಸ್ಯರು**
ವಿಶ್ರಾಂತ ಕುಲಪತಿಗಳು, ತುಮಕೂರು ವಿಶ್ವವಿದ್ಯಾನಿಲಯ, ತುಮಕೂರು

**ಪ್ರೊ. ಎಸ್. ಕೆ. ಸೈದಾಪುರ್, ಸದಸ್ಯರು**
ವಿಶ್ರಾಂತ ಕುಲಪತಿಗಳು, ಕರ್ನಾಟಕ ವಿಶ್ವವಿದ್ಯಾನಿಲಯ, ಧಾರವಾಡ

**ಪ್ರೊ. ವಿ. ಜಿ. ತಳವಾರ್, ಸದಸ್ಯರು**
ವಿಶ್ರಾಂತ ಕುಲಪತಿಗಳು, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

**ಡಾ. ಎ. ಇ. ಏಕನಾಥ್, ಸದಸ್ಯರು**
ನಿವೃತ್ತ ಮಹಾನಿರ್ದೇಶಕರು, ಎನ್.ಎ.ಸಿ.ಎ ಹಾಗೂ ನಿವೃತ್ತ ನಿರ್ದೇಶಕರು, ಸಿ.ಐ.ಎಫ್.ಎ.

**ಡಾ. ಡಿ. ಚನ್ನೇಗೌಡ, ಸದಸ್ಯರು**
ನಿವೃತ್ತ ಪ್ರಾಧ್ಯಾಪಕರು, ರಸಾಯನ ಶಾಸ್ತ್ರ ವಿಭಾಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

### ವಿಶೇಷ ಆಹ್ವಾನಿತರು (ಸರ್ವ ಸದಸ್ಯರ ಸಮಿತಿ ಮತ್ತು ಕಾರ್ಯಕಾರಿ ಸಮಿತಿ)

**ಪ್ರೊ. ಕತ್ರೆ ಶಕುಂತಲಾ, ಸದಸ್ಯರು**
ವಿಶ್ರಾಂತ ಡೀನ್ (ವಿಜ್ಞಾನ) / ಮುಖ್ಯಸ್ಥರು, ಪ್ರಾಣಿಶಾಸ್ತ್ರ ವಿಭಾಗ, ಬೆಂಗಳೂರು ವಿಶ್ವವಿದ್ಯಾನಿಲಯ

**ಪ್ರೊ. ಹೆಚ್. ಎಸ್. ಸಾವಿತ್ರಿ, ಸದಸ್ಯರು**
ವಿಶ್ರಾಂತ ಮುಖ್ಯಸ್ಥರು, ಜೀವ ರಸಾಯನ ಶಾಸ್ತ್ರ ವಿಭಾಗ ಹಾಗೂ NASI ಹಿರಿಯ ವಿಜ್ಞಾನಿ, ಭಾರತೀಯ ವಿಜ್ಞಾನ ಸಂಸ್ಥೆ, ಬೆಂಗಳೂರು

### ವಿಶೇಷ ಆಹ್ವಾನಿತರು (ಸಂಪಾದಕ ಸಮಿತಿ)

**ನಾಡೋಜ ಡಾ. ಪಿ ಎಸ್. ಶಂಕರ್**
ಎಮಿರಿಟಸ್ ಮೆಡಿಸಿನ್ ಪ್ರೊಫೆಸರ್, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನ ವಿಶ್ವವಿದ್ಯಾಲಯ/ ವಿಜ್ಞಾನ ಲೋಕ ಪ್ರಧಾನ ಸಂಪಾದಕರು

**ಶ್ರೀ ನಾಗೇಶ್ ಹೆಗಡೆ**
ಹೆಸರಾಂತ ವಿಜ್ಞಾನ ಲೇಖಕರು/ ಸಂವಹನಕಾರರು/ ಅಂಕಣಕಾರರು

**ಡಾ. ಎ. ಎಂ. ರಮೇಶ್**
ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಗಳು


ಸಂಪರ್ಕ:

**ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ**
ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ
ಮೇಜರ್ ಸಂದೀಪ್ ಉನ್ನಿಕೃಷ್ಣನ್ ರಸ್ತೆ, ತೋಟಗಾರಿಕೆ ವಿಜ್ಞಾನ ಕಾಲೇಜು ದ್ವಾರ,
ದೊಡ್ಡಬೆಟ್ಟಹಳ್ಳಿ ಬಡಾವಣೆ ಬಸ್ ನಿಲ್ದಾಣದ ಹತ್ತಿರ,
ವಿದ್ಯಾರಣ್ಯಪುರ ಪೋಸ್ಟ್, ಯಲಹಂಕ,
ಬೆಂಗಳೂರು - 560 097.
ಇ-ಮೇಲ್: ksta.gok@gmail.com
ವೆಬ್ ಸೈಟ್ : kstacademy.in
ದೂರವಾಣಿ: 91 80 29721550



ವಿಜ್ಞಾನ ವಾಹಿನಿ ಸಂಪಾದಕರು: ಡಾ. ಆನಂದ್ ಆರ್, ಹಿರಿಯ ವೈಜ್ಞಾನಿಕ ಅಧಿಕಾರಿ, ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿ